ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 25, 2021

ಸಂಪುಟ : 48 ಸಂಚಿಕೆ : 194 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com

## ಮಕ್ಕಳ ಅಪೌಷ್ಟಿಕತೆ ಚಿಕಿತ್ಸೆಗೆ ಅರಿವಿನ ಕೊರತೆ

### ಪುನರ್ವಸತಿ ಕೇಂದ್ರಕ್ಕೆ ಬರಲು ಹಲವಾರು ಪೋಷಕರ ನಿರಾಸಕ್ತಿ



ದಾವಣಗೆರೆ, ನ. 24 - ಮಕ್ಕಳಲ್ಲಿನ ಅಪೌಷ್ಟಿಕತೆ ಗಂಭೀರ ಸಮಸ್ಯೆಯಾದರೂ ಸಹ, ಕೊರೊನಾ ಸಂದರ್ಭ ಹಾಗೂ ಪೋಷಕರಲ್ಲಿ ಅರಿವಿನ ಕೊರತೆಯಿಂದಾಗಿ ಸಾಕಷ್ಟು ಮಕ್ಕಳು ಸೂಕ್ತ ಸಮಯದಲ್ಲಿ ಅಪೌಷ್ಟಿಕತೆಗೆ ಚಿಕಿತ್ಸೆ ಪಡೆಯಲು ಸಾಧ್ಯವಾಗಿಲ್ಲ ಎಂಬುದು ನಗರದಲ್ಲಿರುವ ಅಪೌಷ್ಟಿಕ ಮಕ್ಕಳ ಪುನರ್ವಸತಿ ಕೇಂದ್ರದ ಮಾಹಿತಿ ತಿಳಿಸುತ್ತಿದೆ.

ಕಳೆದ ವರ್ಷ 2020ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಜಿಲ್ಲಾ ಚಿಗಟೇರಿ ಆಸ್ಪತ್ರೆಯಲ್ಲಿರುವ ಅಪೌಷ್ಟಿಕ ಮಕ್ಕಳ ಪುನರ್ವಸತಿ ಕೇಂದ್ರವನ್ನು ಮುಚ್ಚಲಾಗಿತ್ತು. ನಂತರದಲ್ಲೂ ಮಕ್ಕಳು ದಾಖಲಾಗುವ ಪ್ರಮಾಣ ಕಡಿಮೆ ಇದೆ. ಪ್ರಸಕ್ತ ಹತ್ತು ಬೆಡ್‌ಗಳಿದ್ದರೆ, ಆರು ಮಕ್ಕಳು ಮಾತ್ರ ದಾಖಲಾಗಿದ್ದಾರೆ.

2018-19ರಲ್ಲಿ ಈ ಕೇಂದ್ರದಲ್ಲಿ 153 ಮಕ್ಕಳು ಚಿಕಿತ್ಸೆ ಪಡೆದಿದ್ದಾರೆ. 2020-21ರಲ್ಲಿ ಕೊರೊನಾ ಕಾರಣದಿಂದ ಈ ಸಂಖ್ಯೆ 53ಕ್ಕೆ ಕುಸಿದಿತ್ತು. 2021-22ರಲ್ಲಿ ಇದುವರೆಗೂ 70 ಮಕ್ಕಳು ಚಿಕಿತ್ಸೆ ಪಡೆದಿದ್ದಾರೆ.

**ಚಿಕಿತ್ಸೆಗೆ ನಿರಾಸಕ್ತಿ :** ಅಪೌಷ್ಟಿಕ ಮಕ್ಕಳಿಗೆ ಉಚಿತ ಊಟ - ಚಿಕಿತ್ಸೆ ನೀಡಲಾಗುತ್ತದೆ. ಮಕ್ಕಳ ಜೊತೆ ಇರುವ ತಾಯಿಗೂ ಉಚಿತ ಊಟದ ಜೊತೆಗೆ ಕೂಲಿ ಪರಿಹಾರವಾಗಿ ದಿನಕ್ಕೆ 275 ರೂ. ನೀಡಲಾಗುತ್ತದೆ. ಇಷ್ಟಾದರೂ, ಹಲವಾರು ಮಕ್ಕಳಿಗೆ ಚಿಕಿತ್ಸೆ ನೀಡಲು ನಿರಾಸಕ್ತಿ ತೋರುತ್ತಿದ್ದಾರೆ.

ಚಿಕಿತ್ಸಾ ಅವಧಿಯಲ್ಲಿ ಅರ್ಧದಲ್ಲೇ ಕರೆದುಕೊಂಡು ಹೋದ ಉದಾಹರಣೆಗಳಿವೆ. ಚಿಕಿತ್ಸೆಗೆ ಅಗತ್ಯವಿರುವ ಮಕ್ಕಳ ಪೈಕಿ ಶೇ.25ರಷ್ಟು ಮಾತ್ರ (2ನೇ ಪುಟಕ್ಕೆ)

### ಮಧ್ಯಮ ವರ್ಗದ ಮಕ್ಕಳಲ್ಲೂ ಅಪೌಷ್ಠಿಕತೆ

**ಕೇವಲ ಬಡತನದಿಂದ ಬಳಲುವ ಮಕ್ಕಳಷ್ಟೇ ಅಲ್ಲದೇ, ಮಧ್ಯಮ ಹಾಗೂ ಶ್ರೀಮಂತ ವರ್ಗದ ಮಕ್ಕಳಲ್ಲೂ ಅಪೌಷ್ಟಿಕತೆ ಕಂಡು ಬಂದ ಉದಾಹರಣೆ ಇವೆ. ಪೌಷ್ಟಿಕತೆ ಕುರಿತ ಮಾಹಿತಿ ಕೊರತೆಯೇ ಇದಕ್ಕೆ ಕಾರಣ ಎಂದು ಕೇಂದ್ರದ ನೋಡಲ್ ಅಧಿಕಾರಿಯಾಗಿರುವ ಡಾ. ಎಂ.ಎಸ್. ಲೋಹಿತ್ ಹೇಳಿದ್ದಾರೆ. ಮಾನವ ಮಾಪನ, ಮೈ - ಕೈ ಊತ ಹಾಗೂ ಎತ್ತರಕ್ಕೆ ತಕ್ಕ ತೂಕ ಇರದೇ ಇರುವುದು ಅಪೌಷ್ಟಿಕತೆಯ ಪ್ರಮುಖ ಲಕ್ಷಣಗಳಾಗಿವೆ. ಅಪೌಷ್ಟಿಕತೆಯನ್ನು ಮಧ್ಯಮ ಹಾಗೂ ತೀವ್ರ ಎಂದು ಎರಡು ವಿಧಗಳಲ್ಲಿ ಗುರುತಿಸಲಾಗುತ್ತಿದೆ. ಈ ಕೇಂದ್ರದಲ್ಲಿ 6 ತಿಂಗಳಿನಿಂದ 5 ವರ್ಷದ ಮಕ್ಕಳಿಗೆ ಅಪೌಷ್ಟಿಕತೆಗೆ ಚಿಕಿತ್ಸೆ ನೀಡಲಾಗುತ್ತದೆ ಎಂದವರು ತಿಳಿಸಿದ್ದಾರೆ.**

## 15 ಜನ ಭ್ರಷ್ಟ ಅಧಿಕಾರಿಗಳು 600 ಕೋಟಿ ಅಕ್ರಮ ಆಸ್ತಿ



ಬೆಂಗಳೂರು, ನ. 24 - ರಾಜ್ಯದ 15 ಭ್ರಷ್ಟ ಅಧಿಕಾರಿಗಳು 600 ಕೋಟಿ ರೂ. ಅಕ್ರಮ ಆಸ್ತಿ ಮಾಡಿರುವುದು ಎ.ಸಿ.ಬಿ. ದಾಳಿಯಿಂದ ಬಯಲಿಗೆ ಬಂದಿದೆ.

ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಧಿಕಾರಿಗಳ ತಂಡ, ಆದಾಯಕ್ಕಿಂತ ಹೆಚ್ಚು ಸಂಪತ್ತು ಹೊಂದಿರುವ ಆರೋಪದ ಮೇಲೆ ರಾಜ್ಯಾದ್ಯಂತ ಈ ಅಧಿಕಾರಿಗಳ ಕಚೇರಿ ಮತ್ತು ಮನೆ ಸೇರಿದಂತೆ 68 ಕಡೆ ದಾಳಿ ನಡೆಸಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ಸಂಪತ್ತು ವಶ ಪಡಿಸಿಕೊಂಡಿದೆ.

ಈ ಭ್ರಷ್ಟ ಅಧಿಕಾರಿಗಳಲ್ಲಿ ಬಿಬಿಎಂಪಿಯ ಡಿ ದರ್ಜೆ ನೌಕರ ಬಗಲಗುಂಟೆ ಗಿರಿ, ಗುಮಾಸ್ತ ಮಾಯಣ್ಣ, ನೆಲಮಂಗಲದ ಸಕಾಲದ ಕೆಎಎಸ್ ಅಧಿಕಾರಿ ಎಲ್.ಸಿ. ನಾಗರಾಜ್, ಯಲಹಂಕ ಸರ್ಕಾರಿ ಆಸ್ಪತ್ರೆಯ ಫಿಸಿಯೋಥೆರಪಿಸ್ಟ್ ರಾಜಶೇಖರ್.

ಜೇವರ್ಗಿಯ ಪಿಡಬ್ಲ್ಯೂಡಿ ಎಂಜಿನಿಯರ್ ಎಸ್.ಎಂ.ಬಿರಾದಾರ್, ಗದಗ್‌ನ ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಬಳ್ಳಾರಿಯ ನಿವೃತ್ತ ಸಬ್‌ರಿಜಿಸ್ಟ್ರಾರ್ ಕೆ.ಎಸ್. ಶಿವಾನಂದ್, ಗೋಕಾಕ್‌ನ ಆರ್‌ಟಿಓ ಸದಾಶಿವ ಮರಲಿಂಗಣ್ಣನವರ್, ಬೈಲುಹೊಂಗಲದ ಸಹಕಾರಿ ಅಭಿವೃದ್ಧಿ ಅಧಿಕಾರಿ ಎ.ಕೆ. ಮಸ್ತಿ. ಸ್ಮಾರ್ಟ್ ಸಿಟಿ ಇಂಜಿನಿಯರ್ ಲಿಂಗೇಗೌಡ, ಮಂಡ್ಯದ ಎಚ್‌ಎಲ್‌ಬಿಸಿ ಕಾರ್ಯನಿರ್ವಾಹಕ ಅಭಿಯಂತರ ಕೆ.ಎಲ್. ಶ್ರೀನಿವಾಸ್, ದೊಡ್ಡಬಳ್ಳಾಪುರ ಕಂದಾಯ ನಿರೀಕ್ಷಕ ಎಲ್. ನರಸಿಂಹಯ್ಯ, ಬೆಂಗಳೂರು ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ವಾಸುದೇವ್, ಬಮೂಲ್‌ನ ಪ್ರಧಾನ ವ್ಯವಸ್ಥಾಪಕ ಬಿ. ಕೃಷ್ಣಾರೆಡ್ಡಿ, ಎಸ್ಕಾಂನ ಸಿ ಗ್ರೂಪ್ ನೌಕರ ನಾತಾಜಿ ಹೀರಾಜಿ ಪಾಟೀಲ್ ಸಿಕ್ಕಿಬಿದ್ದಿದ್ದಾರೆ. (2ನೇ ಪುಟಕ್ಕೆ)

**ರಾಜ್ಯಾದ್ಯಂತ 68 ಕಡೆ 300ಕ್ಕೂ ಹೆಚ್ಚು ಎಸಿಬಿ ತಂಡದ ಅಧಿಕಾರಿಗಳಿಂದ ದಾಳಿ, ತಾರಸಿಯಿಂದ ಹರಿಯುವ ನೀರಿನ ಪೈಪ್‌ನಲ್ಲಿ ಹಣ, ಸೂಟ್ ಕೇಸ್‌ಗಟ್ಟಲೆ ಹಣ, ಕೆ.ಜಿ.ಗಟ್ಟಲೆ ಚಿನ್ನ, ಬೆಳ್ಳಿ, ಚಿನ್ನದ ಬಿಸ್ಕತ್, ಪ್ಲ್ಯಾಟಿನಂ ಆಭರಣಗಳು ಪತ್ತೆ**

## ಕೃಷಿ ಕಾಯ್ದೆಗಳ ವಾಪಸಾತಿ ಮಸೂದೆಗೆ ಸಂಪುಟ ಸಮ್ಮತಿ

ನವದೆಹಲಿ, ನ. 24- ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಸಂಸತ್ತಿನಲ್ಲಿ ಮಂಡಿಸಬೇಕಾದ ಮಸೂದೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ರೈತರ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮಸೂದೆ ವಾಪಸ್ ಪಡೆಯುತ್ತಿದೆ. ಮಸೂದೆಯನ್ನು ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು.

ಕೃಷಿ ಕಾಯ್ದೆಗಳ ವಾಪಸಾತಿ ಮಸೂದೆ, 2021ಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಸಂಸತ್ತು ಈ ಮಸೂದೆಗಳಿಗೆ ಒಪ್ಪಿಗೆ ನೀಡಿತ್ತು. ಕೃಷಿ (3ನೇ ಪುಟಕ್ಕೆ)




ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದ ಬಿಳಿ ಜೋಳದ ಹೊಲದಲ್ಲಿ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಎಡೆಕುಂಟೆ ಹೊಡೆಯುವ ಮೂಲಕ ಗಮನ ಸೆಳೆದರು.

## ಜಲಾಶಯಕ್ಕೆ ಮಾನವ ಚಾಲಿತ ಗೇಟ್‌ಗೆ ಪ್ರಸ್ತಾವನೆ

### ದೇವರಬೆಳಕೆರೆ ಪಿಕಪ್

ಮಲೇಬೆನ್ನೂರು, ನ.24- ದೇವರಬೆಳಕೆರೆ ಪಿಕಪ್ ಜಲಾಶಯದ ಗೇಟ್ ಬಳಿ ಸಂಗ್ರಹವಾಗಿ ನಿಂತಿರುವ ಜಲ ಸಸ್ಯರಾಶಿ ತೆರವು ಕಾರ್ಯಾಚರಣೆ 3ನೇ ದಿನವಾದ ಬುಧವಾರ ನಡೆಯಿತು.

ಈ ದಿನ ಸ್ಥಳಕ್ಕೆ ಆಗಮಿಸಿದ್ದ ಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರ ಚಂದ್ರಹಾಸ್ ಅವರು ಜಲಸಸ್ಯ ರಾಶಿ ತೆರವು ಕಾರ್ಯವನ್ನು ಶಾಸಕ ಎಸ್. ರಾಮಪ್ಪ ಅವರೊಂದಿಗೆ ವೀಕ್ಷಿಸಿದರು.

ನಂತರ 'ಜನತಾವಾಣಿ'ಯೊಂದಿಗೆ ಮಾತನಾಡಿದ ಚಂದ್ರಹಾಸ್ ಅವರು, ಈ ಪಿಕಪ್ ಜಲಾಶಯಕ್ಕೆ 16 ಗೋಡ್‌ಬಳೆ ಗೇಟ್ ಗಳನ್ನು ಹಾಕಲಾಗಿದ್ದು, ಅದರಲ್ಲಿ 4 ಗೇಟ್‌ಗಳನ್ನು ತೆರವು ಮಾಡಿ ಮಾನವ ಚಾಲಿತ ಗೇಟ್‌ಗಳನ್ನು ಅಳವಡಿಸಲು ನೀರಾವರಿ ನಿಗಮಕ್ಕೆ ಯೋಜನೆ ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸುತ್ತೇವೆ. 2 ತಿಂಗಳ ಹಿಂದೆ ಸ್ವಲ್ಪ ಪ್ರಮಾಣದ ಜಲ ಸಸ್ಯರಾಶಿ ಬಂದು ನಿಂತಿದ್ದಾಗ ರೈತರು ಮತ್ತು ದಿನಗೂಲಿ ನೌಕರರು ತೆರವು ಮಾಡಿದ್ದರು.

ಆದರೀಗ ಸೂಳೆಕೆರೆ ಕೋಡಿ ಬಿದ್ದು ನೀರು ಹರಿದು ಬರುತ್ತಿರುವುದರಿಂದ ಜಲ ಸಸ್ಯರಾಶಿ ಹೆಚ್ಚಿನ ಪ್ರಮಾಣದಲ್ಲಿ ಬಂದು ಶೇಖರಣೆಯಾಗಿ ನಿಂತಿರುವುದರಿಂದ ಸ್ವಯಂಚಾಲಿತ ಗೋಡ್‌ಬಳೆ ಗೇಟ್‌ಗಳು ಕೆಲಸ ಮಾಡುತ್ತಿಲ್ಲ. ಹಾಗಾಗಿ ಜಲಾಶಯದ ಹೆಚ್ಚುವರಿ ನೀರು ಹೊರಹೋಗದೆ ನಿಂತಿರುವುದರಿಂದ ಹಿನ್ನೀರಿನಿಂದ ರೈತರಿಗೆ ತೊಂದರೆ ಆಗಿದೆ. ಶಾಸಕ ರಾಮಪ್ಪನವರು ರೈತರ ಹಿತದೃಷ್ಟಿಯಿಂದ ತಮ್ಮ ಸ್ವಂತ ಖರ್ಚಿನಲ್ಲಿ ಇಟಾಚಿ ಮೂಲಕ ಜಲ ಸಸ್ಯರಾಶಿ ತೆರವು ಮಾಡಿಸುತ್ತಿದ್ದಾರೆ.

ಈ ಕಾಮಗಾರಿಯ ಪ್ರಸ್ತಾವನೆ ನನಗೆ ಬಂದಿಲ್ಲ. ಭದ್ರಾ ನಾಲಾ ಉಪವಿಭಾಗದ (3ನೇ ಪುಟಕ್ಕೆ)

## ಕ್ರಿಕೆಟ್ ಟೂರ್ನಿಗೆ ಎಸ್ಸೆಸ್ ಚಾಲನೆ

### ಹೊನಲು ಬೆಳಕಿನ ಪಂದ್ಯಾವಳಿ, 32 ತಂಡಗಳು ಭಾಗಿ



ದಾವಣಗೆರೆ, ನ.24- ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಧರ್ಮಪತ್ನಿ ದಿ. ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿನೆನಪಿನ ಅಂಗವಾಗಿ ನಗರದಲ್ಲಿ ನಾಲ್ಕು ದಿನಗಳ ಕ್ರಿಕೆಟ್ ಹಬ್ಬವು ಇಂದು ಸಂಜೆಯಿಂದ ಶುಭಾರಂಭಗೊಂಡಿತು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘ ಹಾಗೂ ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್‌ನಿಂದ ನಾಳೆ ದಿನಾಂಕ 25 ರಿಂದ 28ರವರೆಗೆ ಹಮ್ಮಿಕೊಂಡಿರುವ ಕಳೆದ 14 ವರ್ಷದ ಶಾಮನೂರು ಡೈಮಂಡ್ ಹಾಗೂ ಶಿವಗಂಗಾ ಕಪ್ 2020 ರಾಷ್ಟ್ರಮಟ್ಟದ ಹೊನಲು ಬೆಳಕಿನ ಟೆನ್ನಿಸ್‌ಬಾಲ್ (ಲೀಗ್ ಕಂ ನಾಟೌಟ್) ಕ್ರಿಕೆಟ್ ಟೂರ್ನಿಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಬ್ಯಾಟಿಂಗ್ ಮಾಡುವ ಮೂಲಕ ಚಾಲನೆ ನೀಡಿದರು. ಆ ಮುಖೇನ ಕ್ರೀ ಡಾ ಪ ಟು ಗ ಳಿ ಗೆ (2ನೇ ಪುಟಕ್ಕೆ)

## 5 ಕೆಜಿ ಉಚಿತ ಆಹಾರ ಧಾನ್ಯ ಯೋಜನೆ

### ಮಾರ್ಚ್‌ವರೆಗೆ ವಿಸ್ತರಣೆ

ನವದೆಹಲಿ, ನ. 24 – ಪ್ರಧಾನ ಮಂತ್ರಿ ಗರೀಬ್ ಅನ್ನ ಯೋಜನೆಯಡಿ 80 ಕೋಟಿ ಜನರಿಗೆ ಪ್ರತಿ ತಿಂಗಳು 5 ಕೆಜಿ ಆಹಾರ ಧಾನ್ಯ ವಿತರಿಸುವ ಯೋಜನೆಯನ್ನು ಕೇಂದ್ರ ಸರ್ಕಾರ 2022ರ ಮಾರ್ಚ್‌ವರೆಗೆ ವಿಸ್ತರಿಸಿದೆ. ಇದರಿಂದ ಬೊಕ್ಕಸಕ್ಕೆ 53,344 ಕೋಟಿ ರೂ.ಗಳ ಹೆಚ್ಚುವರಿ ಹೊರೆಯಾಗಲಿದೆ. ಕಳೆದ ಮಾರ್ಚ್ ತಿಂಗಳಿನಿಂದ ಕೊರೊನಾ ಕಾರಣದಿಂದಾಗಿ ತಿಂಗಳಿಗೆ ಐದು ಕೆಜಿ ಧಾನ್ಯ ವಿತರಿಸುವ ಯೋಜನೆ ಜಾರಿಗೆ ತರಲಾಗಿದೆ. ಪಡಿತರದ ಮೂಲಕ ನೀಡಲಾಗುವ ಧಾನ್ಯಕ್ಕೆ ಹೆಚ್ಚುವರಿಯಾಗಿ ಈ ಧಾನ್ಯ ನೀಡಲಾಗುತ್ತದೆ.

## 13 ರಾಜ್ಯಗಳಲ್ಲಿ ಕೊರೊನಾ ಟೆಸ್ಟ್ ಇಳಿಕೆ

ನವದೆಹಲಿ, ನ. 24 – ದೇಶದ 13 ರಾಜ್ಯಗಳಲ್ಲಿ ಕೊರೊನಾ ಟೆಸ್ಟ್ ಕಡಿಮೆಯಾಗುತ್ತಿರುವ ಹಾಗೂ ಪಾಸಿಟಿವಿಟಿ ದರ ಹೆಚ್ಚಾಗುತ್ತಿರುವ ಬಗ್ಗೆ ಕೇಂದ್ರ ಸರ್ಕಾರ ಪತ್ರ ಬರೆದಿದ್ದು, ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಪಶ್ಚಿಮ ಬಂಗಾಳ, ಕೇರಳ, ಮಹಾರಾಷ್ಟ್ರ, ಪಂಜಾಬ್, ಮಿಜೋರಾಂ, ಮೇಘಾಲಯ ಸೇರಿದಂತೆ ಹಲವು ರಾಜ್ಯಗಳಿಗೆ ಈ ಬಗ್ಗೆ ಪತ್ರ ಬರೆಯಲಾಗಿದೆ. ಹಲವು ದೇಶಗಳಲ್ಲಿ ಕೊರೊನಾ ಹೆಚ್ಚಾಗುತ್ತಿ (2ನೇ ಪುಟಕ್ಕೆ)

## ಮಳೆ ಹಾನಿ: ಪ್ರತಿನಿತ್ಯ 'ಪರಿಹಾರ'ದಲ್ಲಿ ನಮೂದಿಸಲು ಆದೇಶ

ಬೆಂಗಳೂರು, ನ. 24 - ಅಕಾಲಿಕ ಮಳೆ ಯಿಂದ ಉಂಟಾಗಿರುವ ಬೆಳೆ ಹಾನಿಯ ಜಂಟಿ ಸಮೀಕ್ಷೆ ವರದಿಯನ್ನು ಪ್ರತಿನಿತ್ಯ ಪರಿಹಾರ ತಂತ್ರಾಂಶದಲ್ಲಿ ನಮೂದಿಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ನವೆಂಬರ್ 21 ರವರೆಗೆ ಅತಿವೃಷ್ಟಿ ಯಿಂದ ಆಗಿರುವ ಬೆಳೆ ಹಾನಿ ವಿವರವನ್ನು ಆಯಾ ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ರೈತರ ಹೊಲಗಳಿಗೆ ತೆರಳಿ ಸಮೀಕ್ಷೆ ನಡೆಸಿ ಅಂದೇ ಸರ್ಕಾರಕ್ಕೆ ವರದಿ ನೀಡಬೇಕು.

ಈ ವರದಿ ಆಧಾರದ ಮೇಲೆ ಕೇಂದ್ರ ಎನ್‌ಡಿಆರ್‌ಎಫ್ ನಿಯಮಾನುಸಾರ ರೈತ ರಿಗೆ 10 ದಿ ನ ಗ ಳ ಲ್ಲಿ (2ನೇ ಪುಟಕ್ಕೆ)






# ಹರಪನಹಳ್ಳಿ ತಾ.ನಲ್ಲಿ ಅಕಾಲಿಕ ಮಳೆಗೆ 1701 ಹೆ. ಬೆಳೆ ಹಾನಿ : ಶಾಸಕರ ಪರಿಶೀಲನೆ



ಹರಪನಹಳ್ಳಿ, ನ.24- ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ತಾಲ್ಲೂಕಿನಲ್ಲಿ 93 ಮನೆಗಳು ಭಾಗಶಃ ಜಖಂಗೊಂಡಿದ್ದು, ಕೃಷಿ ಹಾಗೂ ತೋಟಗಾರಿಕೆ ಸೇರಿ ಒಟ್ಟು 1701 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ.

ಈ ಕುರಿತು ಶಾಸಕ ಜಿ.ಕರುಣಾಕರ ರೆಡ್ಡಿ ಅವರು ಬುಧವಾರ ತಾಲ್ಲೂಕಿನ ನದಿ ತೀರದ ಗ್ರಾಮಗಳಲ್ಲಿ ಬೆಳೆ ಹಾನಿ ವೀಕ್ಷಿಸಿದ ನಂತರ ಹಲುವಾಗಲಿನಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಮೆಕ್ಕೇಜೋಳ 264 ಹೆ., ರಾಗಿ 89 ಹೆ., ಭತ್ತ 179 ಹೆ. ಸೇರಿ ಒಟ್ಟು 532 ಹೆಕ್ಟೇರ್ ಹಾಗೂ ತೋಟಗಾರಿಕೆ ಬೆಳೆ 1169 ಹೆ. ಸೇರಿ ಒಟ್ಟು 1,701 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ತಿಳಿಸಿದರು.

ತಾವರಗೊಂದಿ ಗ್ರಾಮದಲ್ಲಿ 83 ಫಲಾನುಭವಿಗಳ 3447 ಭತ್ತದ ಚೀಲಗಳು ನದಿಯಲ್ಲಿ ತೇಲಿ ಹೋಗಿವೆ. ಈ ತಿಂಗಳ ಅಂತ್ಯಕ್ಕೆ ಸಂಪೂರ್ಣ ಹಾನಿ ಮಾಹಿತಿ ಸಿಗಲಿದೆ. ಈವರೆಗೂ ದೊರೆತ ಹಾನಿ ವರದಿಯನ್ನು ಜಿಲ್ಲಾಧಿಕಾರಿ ಗಳ ಮೂಲಕ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಅವರು ಹೇಳಿದರು.

ನದಿ ಭಾಗದ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಗ್ರಾ.ಪಂ ವ್ಯಾಪ್ತಿಯಲ್ಲಿ ಬಡವರಿಗೆ ಮನೆ ಹಂಚಿಕೆಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಈ ಕುರಿತು ಕಾಂಗ್ರೆಸ್ ಮುಖಂಡ ಡಾ.ಉಮೇಶ್ ಬಾಬು ಅವರ ಆರೋಪದಲ್ಲಿ ಹುರುಳಿಲ್ಲ ಎಂದರು.

ತಹಶೀಲ್ದಾರ್ ಎಲ್.ಎಂ.ನಂದೀಶ್, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಗೊಂದಿ, ಎಇಇ ಸತೀಶ್ ಪಾಟೀಲ್, ತೋಟಗಾರಿಕೆ ಸಹಾಯಕ ನಿರ್ದೇಶಕ ಜಯಸಿಂಹ, ತಾಲ್ಲೂಕು ಬಿಜೆಪಿ ಘಟಕದ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ ಘಟಕದ ಕಾರ್ಯದರ್ಶಿ ಆರ್ .ಲೋಕೇಶ್, ಮುಖಂಡರಾದ ಎಂ.ಪಿ.ನಾಯ್ಕ, ಡಾ.ಎಂ.ಬಿ. ಅಧಿಕಾರ್, ಈಡಿಗರ ಅಂಜಿನಪ್ಪ, ರಾಘವೇಂದ್ರ ಶೆಟ್ಟಿ, ಯು.ಪಿ.ನಾಗರಾಜ, ಎಚ್ .ಟಿ.ಗಿರೀಶಪ್ಪ, ಮಲ್ಲೇಶ, ಕಲ್ಲೇರ ಬಸವರಾಜ, ಮೆಡಿಕಲ್ ತಿಮ್ಮಣ್ಣ ಸೇರಿದಂತೆ ಇತರರು ಇದ್ದರು.

# ಜಗಳೂರು ತಾ.ನಲ್ಲಿ ಮಳೆಯಿಂದ ಸಾವಿರಾರು ಎಕರೆ ಬೆಳೆ ಹಾನಿ : 30 ಮನೆಗಳು ಕುಸಿತ

ಜಗಳೂರು, ನ.24- ಇತ್ತೀಚೆಗೆ ಸುರಿದ ಮಳೆಯಿಂದಾಗಿ ತಾಲ್ಲೂಕಿನಾದ್ಯಂತ ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿರುವುದಾಗಿ ವರದಿಯಾಗಿದ್ದು, ಅಧಿಕಾರಿಗಳು ಬೆಳೆ ಹಾನಿ ಸಮೀಕ್ಷಾ ಕಾರ್ಯ ಕೈಗೊಂಡಿದ್ದಾರೆ.

ಪಟ್ಟಣದಲ್ಲಿ ಸುಮಾರು 30ಕ್ಕೂ ಹೆಚ್ಚು ಮನೆಗಳು ಕುಸಿದಿವೆ. ಯಾವುದೇ ಪ್ರಾಣಾಪಾಯವಾಗಿಲ್ಲ. ಪ.ಪಂ ಅಧ್ಯಕ್ಷ ಮತ್ತು ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ತಾಲ್ಲೂಕಿನಲ್ಲಿ ನವೆಂಬರ್ ಅಂತ್ಯದ ವೇಳೆಗೆ ವಾಡಿಕೆ ಮಳೆ 515ಮಿ.ಮೀ ಪೈಕಿ ವಾಸ್ತವಿಕ ಮಳೆ 699ಮಿ.ಮೀ. ಸುರಿದಿದೆ. ಕೆರೆ-ಕಟ್ಟೆಗಳಲ್ಲಿ ಅಲ್ಪ ಪ್ರಮಾಣದ ನೀರು ಸಂಗ್ರಹವಾಗಿದೆ. ಆದರೆ ತಾಲ್ಲೂಕಿನ ಯಾವುದೇ ಕೆರೆಗಳು ಭರ್ತಿಯಾಗಿಲ್ಲ. ಆದರೆ ರೈತರ ಬೆಳೆಗಳಿಗೆ ತೀವ್ರ ಹಾನಿ ಉಂಟಾಗಿದೆ.

ಸುಮಾರು 870 ಹೆಕ್ಟೇರ್ ಮೆಕ್ಕೆಜೋಳ, ರಾಗಿ ಸುಮಾರು 50 ಹೆ., ಶೇಂಗಾ 470 ಹೆ. ಮತ್ತು ಕಡಲೆ 85 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.





ಸೊಕ್ಕೆ ಮತ್ತು ಕಸಬಾ ಹೋಬಳಿಗಳಲ್ಲಿ ಮೆಕ್ಕೆಜೋಳ, ಶೇಂಗಾ ಬೆಳೆಗಳಿಗೆ ಸಾಕಷ್ಟು ಹಾನಿ ಉಂಟಾಗಿದೆ. ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ರಾಗಿ ಮತ್ತು ಕಡಲೆ ಹಾಗೂ ಶೇಂಗಾ ಬೆಳೆಗಳಿಗೆ ಹಾನಿ ಉಂಟಾಗಿದೆ. ಕಸಬಾ ಹೋಬಳಿ ತೊರೆ ಸಾಲು ಗ್ರಾಮಗಳಲ್ಲಿ ಕಡಲೆಗೆ ಹೆಚ್ಚಿನ ನಷ್ಟ ಉಂಟಾಗಿದ್ದು ರೈತರು ಆತಂಕಗೊಂಡಿದ್ದಾರೆ.

**ಈರುಳ್ಳಿ ಬೆಳೆ ಸಂಪೂರ್ಣ ನಾಶ:** ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಈವರೆಗೂ 2600 ಹೆಕ್ಟೇರ್ ಈರುಳ್ಳಿ ಬೆಳೆ ಸಂಪೂರ್ಣವಾಗಿ ಹಾಳಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸೊಕ್ಕೆ ಹೋಬಳಿ ವ್ಯಾಪ್ತಿಯಲ್ಲಿ ಹೆಚ್ಚಾಗಿ ಬಿತ್ತನೆ ಮಾಡಲಾಗಿದ್ದ ಈರುಳ್ಳಿ ಬೆಳೆ ಸಂಪೂರ್ಣವಾಗಿ ನಾಶವಾಗಿದ್ದು ರೈತರ ಕಣ್ಣಲ್ಲಿ ನೀರು ತರಿಸಿದೆ.

**ತರಕಾರಿ ಬೆಲೆ ಗಗನಕ್ಕೆ:** ಮಳೆಯಿಂದಾಗಿ ಮಾರುಕಟ್ಟೆಗೆ ಗ್ರಾಮೀಣ ಪ್ರದೇಶಗಳಿಂದ ತರಕಾರಿ ಬಾರದೇ ಇರುವುದರಿಂದ ಮಾರುಕಟ್ಟೆಯಲ್ಲಿ ತರಕಾರಿ ಬೆಲೆ ಗಗನಕ್ಕೇರಿದೆ. ಪ್ರತಿ ಕೆ.ಜಿ.ಗೆ ಟೊಮ್ಯಾಟೋ 100 ರೂ. ಈರುಳ್ಳಿ 50 ರೂ. ಹಸಿ ಮೆಣಸಿನಕಾಯಿ 40 ರೂ., ಕ್ಯಾರೆಟ್ ಮತ್ತು ಬೀನ್ಸ್ 70 ರೂ.ಗಳಂತೆ ಮಾರಾಟ ಮಾಡಲಾಗುತ್ತಿದೆ.

## 'ಪರಿಹಾರ'ದಲ್ಲಿ ನಮೂದಿಸಲು ಆದೇಶ

**(1ನೇ ಪುಟದಿಂದ)** ಪರಿಹಾರ ದೊರಕಲಿದೆ. ನವೆಂಬರ್ 30 ರವರೆಗೆ ಉಂಟಾಗುವ ಬೆಳೆ ಹಾನಿ ವಿವರಗಳನ್ನು ಡಿಸೆಂಬರ್ 7 ರೊಳಗೆ ಸ್ಥಳೀಯವಾಗಿ ಸಂಬಂಧಪಟ್ಟ ಕೃಷಿ ಹಾಗೂ ತೋಟಗಾರಿಕೆ ಅಧಿಕಾರಿಗಳು ಜಂಟಿ ಯಾಗಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಬೇಕು.

ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಉಂಟಾದ ಪ್ರಾಕೃತಿಕ ವಿಕೋಪ ಸ್ಥಿತಿಯನ್ನು ಪರಿಶೀಲಿಸಿ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಹಾನಿ ವಿವರಗಳನ್ನು ಸರ್ಕಾರಕ್ಕೆ ಕಳುಹಿಸಬೇಕು. ಮನೆಗಳಿಗೆ ನೀರು ನುಗ್ಗಿ ಹಾನಿಗೊಳಗಾದ ಗೃಹೋಪಯೋಗಿ ವಸ್ತುಗಳಿಗೆ 10 ಸಾವಿರ ರೂ., ಶೇಕಡ 75 ಕ್ಕಿಂತ ಹೆಚ್ಚು ಮನೆ ಹಾನಿಯಾಗಿದ್ದರೆ 3 ಲಕ್ಷ ರೂ. ಹಾಗೂ ಶೇಕಡ 15 ರಿಂದ ಭಾಗಶಃ ಹಾನಿಯಾಗಿದ್ದರೆ 50 ಸಾವಿರ ರೂ. ಪರಿಹಾರ ಕಲ್ಪಿಸುವಂತೆ ಆದೇಶ ಹೊರಡಿಸಲಾಗಿದೆ.

## ಇಂದು ವಿಶ್ವ ಮೂಲವ್ಯಾಧಿ ದಿನಾಚರಣೆ

## ನಗರದಲ್ಲಿ ಮೂಲವ್ಯಾಧಿ ತಪಾಸಣೆ

ವಿಶ್ವ ಮೂಲವ್ಯಾಧಿ ದಿನದ ಪ್ರಯುಕ್ತ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿನ ಆಯುಷ್ ಪಂಚಕರ್ಮ ವಿಭಾಗ, ಕೊಠಡಿ ಸಂಖ್ಯೆ 50 ರಲ್ಲಿ ಮೂಲವ್ಯಾಧಿ ಉಚಿತ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಪೈಲ್ಸ್, ಫಿಜರ್, ಭಗಂಧರ ರೋಗಗಳಿಗೆ ಹುಲಿಕಟ್ಟೆ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಯುರ್ವೇದ ವೈದ್ಯಾಧಿಕಾರಿ ಡಾ.ಸುಧಾ ಹೆಚ್.ಎಂ ಹಾಗೂ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆಯುಷ್ ವಿಭಾಗದ ಆಯುರ್ವೇದ ವೈದ್ಯಾಧಿಕಾರಿ ಡಾ. ಬಿ. ಶಿವಕುಮಾರ್ ಅವರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

# ಹರಿಹರ : ಬಸ್ ನಿಲ್ದಾಣ ಕಾಮಗಾರಿಗೆ ವಿರೋಧ



### ಅಧಿಕಾರಿಗಳಿಂದ ಮನವೊಲಿಕೆ

ಹರಿಹರ,ನ. 24- ನಗರದ ಜೈ ಭೀಮ ನಗರ ಬಡಾವಣೆಯ ಮುಂಭಾಗದಲ್ಲಿ ಬಸ್ ನಿಲ್ದಾಣ ಕಾಮಗಾರಿ ಮಾಡುವುದಕ್ಕೆ ರಸ್ತೆಯ ಪಕ್ಕದಲ್ಲಿ ಇರುವ ಅಂಗಡಿ ಮಾಲೀಕರು ವಿರೋಧ ಮಾಡಿದ ನಂತರ ಅಧಿಕಾರಿಗಳು ಅವರ ಮನವೊಲಿಸಿ ಸಮಸ್ಯೆ ಬಗೆಹರಿಸಿದ್ದಾರೆ.

ಅಮರಾವತಿ ಪಕ್ಕದ ಜೈ ಭೀಮನಗರ ಬಡಾವಣೆಯ ಮುಂಭಾಗದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಸಂಸದರ 5 ಲಕ್ಷ ರೂಪಾಯಿ ಅನುದಾನದಲ್ಲಿ ಬಸ್ ನಿಲ್ದಾಣ ಕಾಮಗಾರಿಗೆ ನಿರ್ಧರಿಸಲಾಗಿತ್ತು. ಆದರೆ, ಸ್ಥಳೀಯ ವ್ಯಾಪಾರಿಗಳಾದ ಹನುಮಂತಪ್ಪ, ಭಾಷ ಮತ್ತಿತರರು ಬಸ್ ನಿಲ್ದಾಣದಿಂದ ನಮ್ಮ ವಹಿವಾಟಿಗೆ ಹಾಗೂ ಗ್ರಾಹಕರು ವಾಹನ ನಿಲುಗಡೆ ಮಾಡಲು ತೊಂದರೆಯಾಗುತ್ತದೆ ಎಂದು ವಿರೋಧಿಸಿದರು.

ಸ್ಥಳಕ್ಕೆ ಆಗಮಿಸಿದ ಪೌರಾಯುಕ್ತೆ ಎಸ್.ಲಕ್ಷ್ಮಿ, ಡಿವೈಎಸ್ಪಿ ಭೂತೇಗೌಡ್ರು, ಲೋಕೋಪಯೋಗಿ ಇಲಾಖೆಯ ಚಂದ್ರಕಾಂತ್, ನಿರ್ಮಿತಿ ಕೇಂದ್ರದ ರಾಮಲಿಂಗಪ್ಪ ಹಾಗೂ ನಗರಸಭೆ ಉಪಾಧ್ಯಕ್ಷ ಎಂ.ಎಸ್. ಬಾಬುಲಾಲ್, ಸ್ಥಳೀಯ ನಗರಸಭೆ ಸದಸ್ಯ ದಿನೇಶ್ ಬಾಬು ಮತ್ತಿತರರು ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ ಮಾಡದಂತೆ ವರ್ತಕರ ಮನವೊಲಿಸಿದರು. ಅಂಗಡಿಗಳ ನಡುವೆ ಜಾಗ ಬಿಟ್ಟು, ಸಾರ್ವಜನಿಕರಿಗೆ ತೊಂದರೆಗಳು ಬರದಂತೆ ಬಸ್ ನಿಲ್ದಾಣ ಕಾಮಗಾರಿ ಮಾಡುವುದಾಗಿ ಅಧಿಕಾರಿಗಳು ತಿಳಿಸಿದ್ದಕ್ಕೆ, ವರ್ತಕರು ಸಮ್ಮತಿಸಿದ್ದಾರೆ.

ಈ ವೇಳೆ ಮಾತನಾಡಿದ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಚಂದ್ರಕಾಂತ್, ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಾಮಗಾರಿ ಪ್ರಾರಂಭ ಮಾಡುವಾಗ ನಮ್ಮ ಇಲಾಖೆಯ ಗಮನಕ್ಕೆ ತಂದು ಆದೇಶ ಪಡೆದ ನಂತರದಲ್ಲಿ ಕಾಮಗಾರಿ ಪ್ರಾರಂಭ ಮಾಡುವುದಕ್ಕೆ ಮುಂದಾಗಬೇಕಾಗಿದೆ. ಆದರೆ, ನಿರ್ಮಿತಿ ಕೇಂದ್ರದವರು ನಮ್ಮ ಇಲಾಖೆಗೆ ಯಾವುದೇ ರೀತಿಯ ಮಾಹಿತಿ ನೀಡದೆ ಕಾಮಗಾರಿ ಪ್ರಾರಂಭ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಮಾಡಬೇಕಾದರೆ 23 ಮೀಟರ್ ಸ್ಥಳವನ್ನು ಬಿಟ್ಟು ಕಾಮಗಾರಿ ಮಾಡಬೇಕು ಎಂದೂ ಸಹ ತಿಳಿಸಲಾಗಿದೆ ಎಂದರು.

## ಕ್ರಿಕೆಟ್ ಟೂರ್ನಿಗೆ ಎಸ್ಸೆಸ್ ಚಾಲನೆ

**(1ನೇ ಪುಟದಿಂದ)** ಚೈತನ್ಯವುಂಟು ಮಾಡಿದರಲ್ಲದೇ, ಶುಭ ಹಾರೈಸಿದರು.

ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 32 ತಂಡಗಳು ಭಾಗವಹಿಸಲಿವೆ. ಗುರುವಾರದಿಂದ ಹೊನಲು ಬೆಳಕಿನಲ್ಲಿ ಪಂದ್ಯಾವಳಿಗಳು ನಡೆಯಲಿವೆ.

ಹರಿಹರ ಯಂಗ್ ಇಲಾಹಿ ಕ್ರಿಕೆಟರ್ಸ್ ಹಾಗೂ ಕರೂರು ಫ್ರೆಂಡ್ಸ್ ನಡುವೆ ಆರಂಭಿಕ ಪಂದ್ಯಾಟ ನಡೆಯಿತು. ಟಾಸ್ ಗೆದ್ದ ಹರಿಹರ ಯಂಗ್ ಇಲಾಹಿ ಕ್ರಿಕೆಟರ್ಸ್ ಬ್ಯಾಟಿಂಗ್ ಅವಕಾಶವನ್ನು ಕರೂರು ಫ್ರೆಂಡ್ಸ್ ಗೆ ನೀಡಿ, ಬೌಲಿಂಗ್ ಆಯ್ಕೆ ಮಾಡಿಕೊಂಡಿತು.

ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉದ್ಯಮಿಗಳಾದ ಅಥಣಿ ವೀರಣ್ಣ, ಮಹಾದೇವ್, ಸಂಘದ ಉಪಾಧ್ಯಕ್ಷ ಶಿವಗಂಗಾ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಕುರುಡಿ ಗಿರೀಶ್ (ಸ್ವಾಮಿ), ಸಹ ಕಾರ್ಯದರ್ಶಿ ಜಯಪ್ರಕಾಶ್ ಗೌಡ, ಕಾಂಗ್ರೆಸ್ ಮುಖಂಡ ಅಯೂಬ್ ಪೈಲ್ವಾನ್, ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್‌ನ ಮಾಲೀಕ ಮಹಾದೇವ್, ರಮೇಶ್ ಬಾಬು, ವಿಜಯಕುಮಾರ್, ದುಗ್ಗಪ್ಪ, ರಾಜು ರೆಡ್ಡಿ, ಚಾಮುಂಡಿ ಕುಮಾರ್, ಸುರೇಶ್, ಶೌಕತ್, ರಂಗಸ್ವಾಮಿ ಸೇರಿದಂತೆ ಇತರರು ಇದ್ದರು. ಇದೇ ವೇಳೆ ಕ್ರೀಡಾ ಪ್ರೋತ್ಸಾಹಕರನ್ನು ಸನ್ಮಾನಿಸಲಾಯಿತು.

## 13 ರಾಜ್ಯಗಳಲ್ಲಿ ಕೊರೊನಾ ಟೆಸ್ಟ್ ಇಳಿಕೆ

**(1ನೇ ಪುಟದಿಂದ)** ರುವುದರಿಂದ ಎಚ್ಚರಿಕೆ ವಹಿಸುವಂತೆಯೂ ತಿಳಿಸಲಾಗಿದೆ.

ಕೊರೊನಾ ಪರೀಕ್ಷೆ ಕಡಿಮೆ ಮಾಡುವುದರಿಂದ ಸಮುದಾಯದಲ್ಲಿ ಸೋಂಕು ಹರಡುವುದನ್ನು ಕಡೆಗಣಿಸಿದಂತಾಗುತ್ತದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

# 15 ಜನ ಭ್ರಷ್ಟ ಅಧಿಕಾರಿಗಳು 600 ಕೋಟಿ ಅಕ್ರಮ ಆಸ್ತಿ

**(1ನೇ ಪುಟದಿಂದ)** ಬುಧವಾರ ಬೆಳ್ಳಂ ಬೆಳಗ್ಗೆ ಎಸಿಬಿಯ 300ಕ್ಕೂ ಹೆಚ್ಚು ಅಧಿಕಾರಿಗಳು ಈ ಅಧಿಕಾರಿಗಳ ತಾಣಗಳ ಮೇಲೆ ದಾಳಿ ನಡೆಸಿ 4 ಕೋಟಿ ರೂ. ನಗದು, 16 ಕೋಟಿ ರೂ. ಮೌಲ್ಯದ ಚಿನ್ನ ಹಾಗೂ 16 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿಯ ದಾಖಲೆಗಳನ್ನು ವಶ ಪಡಿಸಿಕೊಂಡಿದ್ದಾರೆ. ತನಿಖೆ ಮುಂದುವರೆದಿದ್ದು, ಅಕ್ರಮ ಆಸ್ತಿಯ ಪ್ರಮಾಣ ದ್ವಿಗುಣಗೊಂಡರೂ ಆಶ್ಚರ್ಯವಿಲ್ಲ.

ಇತ್ತೀಚಿನ ದಿನಗಳಲ್ಲಿ ನಡೆದ ದಾಳಿಗಳಲ್ಲಿ ಇದು ಭಾರೀ ಮೊತ್ತದ್ದಾಗಿದ್ದು, ಅಧಿಕಾರಿಗಳೇ ದಂಗಾಗಿದ್ದಾರೆ.

ಕೆಲವು ಅಧಿಕಾರಿಗಳು ಕಪ್ಪು ಹಣವನ್ನು ಮನೆಯ ತಾರಸಿಯಿಂದ ಹರಿಯುವ ನೀರಿನ ಪೈಪಿನಲ್ಲಿ ಹುದುಗಿಸಿಟ್ಟಿದ್ದರು.

ಎಲ್ಲರ ಮನೆಯಲ್ಲೂ ಕೆ.ಜಿ.ಗಟ್ಟಲೆ ಚಿನ್ನ, ಬೆಳ್ಳಿ, ಸೂಟ್ ಕೇಸ್‌ಗಟ್ಟಲೆ ಹಣ, ಚಿನ್ನದ ಬಿಸ್ಕತ್ ಹಾಗೂ ಪ್ಲಾಟಿನಂ ಆಭರಣಗಳು ಪತ್ತೆಯಾಗಿವೆ.

ಕೆಲವು ಅಧಿಕಾರಿಗಳು ತಾವು ನಿರ್ಮಿಸಿರುವ ಮನೆಗಳಲ್ಲಿ ಭಾರೀ ಬೆಲೆ ಬಾಳುವ ಅಲಂಕಾರಿಕ ವಿದೇಶಿ ವಸ್ತುಗಳನ್ನು ಅಳವಡಿಸಿದ್ದಾರೆ. ಇವರ ಬಳಿ ಐಷಾರಾಮಿ ಕಾರುಗಳಿವೆ.

ಗದಗ್‌ನ ರುದ್ರೇಶಪ್ಪ ಹಾಗೂ ಬೆಂಗಳೂರಿನ ಮಾಯಣ್ಣ ಅತಿ ಹೆಚ್ಚು ಅಕ್ರಮ ಆಸ್ತಿ-ಪಾಸ್ತಿ ಹೊಂದಿದ್ದಾರೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

## ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ನ. 24- ಮಾಜಿ ಸೈನಿಕರ ಮಕ್ಕಳಿಗೆ ಪ್ರಧಾನಮಂತ್ರಿ ಶಿಷ್ಯ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಡಿಸೆಂಬರ್ 31 ರವರೆಗೆ ವಿಸ್ತರಿಸಲಾಗಿದೆ.

# ಮಕ್ಕಳ ಅಪೌಷ್ಟಿಕತೆ ಚಿಕಿತ್ಸೆಗೆ ಅರಿವಿನ ಕೊರತೆ

**(1ನೇ ಪುಟದಿಂದ)** ಸದ್ಯಕ್ಕೆ ಕೇಂದ್ರಕ್ಕೆ ಬರುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

**ರೋಗದಿಂದಲೂ ಅಪೌಷ್ಟಿಕತೆ :** ಪ್ರೊಟೀನ್ ಕೊರತೆಯಿಂದಾಗಿ ಅಪೌಷ್ಟಿಕತೆ ಸಮಸ್ಯೆ ಎದುರಿಸುವ ಮಕ್ಕಳ ಸಂಖ್ಯೆ ಹೆಚ್ಚು. ಅನುವಂಶಿಕ ಸಮಸ್ಯೆ ಹಾಗೂ ಕಾಯಿಲೆಗಳಿಂದಲೂ ಮಕ್ಕಳು ಅಪೌಷ್ಟಿಕತೆಗೆ ಗುರಿಯಾಗುತ್ತಾರೆ. ನ್ಯುಮೋನಿಯ, ಕ್ಷಯ ಹಾಗೂ ಹೃದಯ ಸಮಸ್ಯೆಗಳಿಂದಲೂ ಅಪೌಷ್ಟಿಕತೆ ಹೆಚ್ಚಾಗುತ್ತದೆ ಎಂದು ಕೇಂದ್ರದ ನೋಡಲ್ ಅಧಿಕಾರಿಯಾಗಿರುವ ಡಾ. ಎಂ. ಎನ್. ಲೋಹಿತ್ ತಿಳಿಸಿದ್ದಾರೆ.

ಸಾಮಾನ್ಯವಾಗಿ ಪುನರ್ವಸತಿ ಕೇಂದ್ರಕ್ಕೆ ದಾಖಲಾದ ಮಕ್ಕಳು 14 ದಿನಗಳಲ್ಲೇ ಶೇ.90ರಷ್ಟು ಮಕ್ಕಳು ಶೇ.15ರವರೆಗೆ ತೂಕ ಹೆಚ್ಚಿಸಿಕೊಂಡು ಬಿಡುಗಡೆಯಾಗುತ್ತಾರೆ. ಮಕ್ಕಳ ಅಪೌಷ್ಟಿಕತೆಗೆ ಬೇರೆ ಬೇರೆ ರೋಗಗಳೂ ಕಾರಣವಾಗಿದ್ದರೆ, ಅದಕ್ಕೂ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ ಎಂದವರು ತಿಳಿಸಿದ್ದಾರೆ.

ಅಪೌಷ್ಟಿಕ ಮಕ್ಕಳನ್ನು ಗುರುತಿಸುವಲ್ಲಿ ಅಂಗನವಾಡಿಗಳು ಪ್ರಮುಖ ಪಾತ್ರ ವಹಿಸಿವೆ. ಅಲ್ಲಿಂದಲೇ ಹೆಚ್ಚು ಮಕ್ಕಳನ್ನು ಗುರುತಿಸಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುತ್ತಿದೆ.

ಅಂಗನವಾಡಿಗಳಲ್ಲಿ ಅಪೌಷ್ಟಿಕ ಮಕ್ಕಳನ್ನು ಗುರುತಿಸುವ ಜೊತೆಗೆ ಅವರಿಗೆ ಸ್ಪಿರುಲಿನಾ ಚಿಕ್ಕಿ, ಬೂಸ್ಟರ್ ಸೇರಿದಂತೆ ಅಗತ್ಯ ಆಹಾರ ಒದಗಿಸಲಾಗುತ್ತಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆಯಲ್ಲಿ ಸಾಕಷ್ಟು ಇಳಿಕೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ. ಹೆಚ್. ವಿಜಯಕುಮಾರ್ ತಿಳಿಸಿದ್ದಾರೆ.

### ಸೋರುತಿರುವ ಕಟ್ಟಡ

ಪುನರ್ವಸತಿ ಕೇಂದ್ರ ಸುಮಾರು 60 ವರ್ಷಗಳಷ್ಟು ಹಳೆಯದಾಗಿದ್ದು ಶಿಥಿಲವಾಗಿದೆ. ಮಳೆ ಬಂದಾಗ ಹಲವೆಡೆ ಸೋರುತ್ತಿದ್ದು, ಗೋಡೆಗಳೂ ಬಿರುಕು ಬಿಟ್ಟಿವೆ. ಈ ಹಿನ್ನೆಲೆಯಲ್ಲಿ ನೂತನ ಕಟ್ಟಡ ಕಲ್ಪಿಸುವ ಪ್ರಸ್ತಾವನೆ ಇದೆ.

ಚಿಗಟೇರಿ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ - ಮಗುವಿನ ಆಸ್ಪತ್ರೆ ಕಟ್ಟಡ ನಿರ್ಮಾಣವಾಗುತ್ತಿದೆ. ಇದರಲ್ಲೇ ಪುನರ್ವಸತಿ ಕೇಂದ್ರಕ್ಕೆ ಅವಕಾಶ ಕಲ್ಪಿಸುವಂತೆ ಆರೋಗ್ಯ ಇಲಾಖೆಯ ನಿರ್ದೇಶಕ ರಾಜ್‌ಕುಮಾರ್ ಅವರು ಸೂಚಿಸಿದ್ದಾರೆ. ಈ ಬಗ್ಗೆ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ ಎಂದು ಡಿಸ್ಟ್ರಿಕ್ಟ್ ಸರ್ಜನ್ ಡಾ. ಜಯಪ್ರಕಾಶ್ ತಿಳಿಸಿದ್ದಾರೆ.


**ಮನೆ ಬಾಡಿಗೆಗಿದೆ**
ಕೆ.ಬಿ. ಬಡಾವಣೆ ಸಿದ್ದಮ್ಮ ಪಾರ್ಕ್ ಹತ್ತಿರ ಮೊದಲನೇ ಮಹಡಿ ಎರಡು ಬೆಡ್ ರೂಂವುಳ್ಳ ಸುಸಜ್ಜಿತವಾದ ಎಲ್ಲಾ ಸೌಕರ್ಯವುಳ್ಳ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
91646 26654

**ಸೈಟ್, ಮನೆ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ, ಶಿವ ಪಾರ್ವತಿ, ಜೆ.ಹೆಚ್. ಪಟೇಲ್ ಬಡಾವಣೆ (ಸುತ್ತಮುತ್ತ)
ಶಿವ ಪಾರ್ವತಿ : 30x50 ಪೂರ್ವ. 30x40 ಕಾರ್ನರ್ 40x60, 30x50 ಡ್ಯೂಪ್ಲೆಕ್ಸ್. JHP : 30x40 ಹೊಸ ಮನೆ 30x50 ಮನೆ 30x45 ಉತ್ತರ, 30x40 ಪೂರ್ವ ಸೈಟ್. ಡಾಲರ್ಸ್ ಕಾಲೋನಿ : 60x90, 60x50, 40x70, 30x37, 30x39, 40x60 ಇನ್ನು ಅನೇಕ
ಕಿರಣ್ ಬೂಸ್ನೂರ್
98440 63409, 97315 63409

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾರ್ಥಿ ಭವನ ಹತ್ತಿರ ಹರ್ಷ ಬಾರ್ ಹಿಂಭಾಗದಲ್ಲಿ 30x40 South, 60x40 Corner, 30x40, 30x40 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಆಸ್ಪತ್ರೆ / ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡಲು ನುರಿತ ನರ್ಸ್‌ಗಳು, ಅನುಭವವುಳ್ಳ ಎ.ಎನ್.ಎಂ ಆದವರು ಬಯೋಡೇಟಾದೊಂದಿಗೆ ವಿಚಾರಿಸಿ.
ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

**WANTED**
Required Male Office Assistant
ANDANUR CHITS (R)
Ram & co Circle
Davanagere

**ಡ್ರೈವರ್ ಬೇಕಾಗಿದ್ದಾರೆ**
ಅಶೋಕ ಲೈಲ್ಯಾಂಡ್ ಗಾಡಿಗೆ ಡ್ರೈವರ್ ಬೇಕಾಗಿದ್ದಾರೆ.
94487 51313

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 18 ಕಿ.ಮೀ ದೂರದ ಹಳ್ಳಿಕೇರಿ ಮತ್ತು ಶಿಂಗ್ರಿಹಳ್ಳಿ ನಡುವೆ 4 ಎಕರೆ ಆಪೋಸ್ ಮಾವಿನ ತೋಟ, 3 ಎಕರೆ ತೆಂಗು ಮತ್ತು ಅಡಿಕೆ, 2 ಬೋರ್‌ವೆಲ್, ತಂತಿ ಬೇಲಿ ರಸ್ತೆ ಹೊಂದಿರುವ, ಫಸಲಿಗೆ ಬಂದಿರುವ ತೋಟ ಮಾರಾಟಕ್ಕಿದೆ.
98809 33630

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ನಂ. 1355, 1200 sft, 16ನೇ ಕ್ರಾಸ್, ತರಳಬಾಳು ಬಡಾವಣೆ, ಸೋಲಾರ್ ವ್ಯವಸ್ಥೆ ಇರುವ ನೂತನ ಬಿಲ್ಡಿಂಗ್, ಸೌತ್ ಫೇಸಿಂಗ್ ಬಾಗಿಲು
ಸಸ್ಯಹಾರಿಗಳಿಗೆ ಆದ್ಯತೆ, ಸಂಪರ್ಕಿಸಿ :
88614 62603

**ಶಿಕ್ಷಕ /ಶಿಕ್ಷಕಿಯರು ಬೇಕಾಗಿದ್ದಾರೆ**
1) BA/BCOM/BSC/NTC -01
2) DEd/BEd/-01 3) BPEd/ CPEd-01
ನಿಸರ್ಗ ಕಾನ್ವೆಂಟ್, HKR ಸರ್ಕಲ್ ಹತ್ತಿರ, ನಿಟುವಳ್ಳಿ, ಬ್ರಾಂಚ್, ದಾವಣಗೆರೆ.
89716 32458, 98444 43374, 99862 26454

**ಮನೆ/ರೂಂಗಳು ಬಾಡಿಗೆಗಿವೆ**
ಡಬಲ್ ಬೆಡ್ ರೂಂ ಮನೆ ಮತ್ತು ರೂಂಗಳು ಬಾಡಿಗೆಗೆ
ಎಸ್. ಎಸ್. ಹೈಟೆಕ್ ಲೇಔಟ್, ಹೈಟೆಕ್ ಹಾಸ್ಪಿಟಲ್ ಎದುರು, ಧರ್ಮಸ್ಥಳ ಬಿಲ್ಡಿಂಗ್ ಹತ್ತಿರ, ದಾವಣಗೆರೆ
94497 72655

**WANTED**
Marketing Executive and Fitter for ACCUTECH AGRO pvt.ltd. Davangere.
( working place : Davangere and Chitradurga district)
Contact : 9606922874, 9606922871

**ಗೋಡೌನ್ ಬಾಡಿಗೆಗೆ ಇದೆ**
ಎಪಿಎಂಸಿ ಯಾರ್ಡ್ 'ಎ' ಬ್ಲಾಕ್‌ನಲ್ಲಿ ಡೋರ್ ನಂ. 1214/46, 45x120 ಅಡಿ ಅಳತೆಯ ಗೋಡೌನ್ ಬಾಡಿಗೆಗೆ ಇದೆ. ಸಂಪರ್ಕಿಸಿ
94496 02895

**Building ಬಾಡಿಗೆಗೆ ಇದೆ**
ಹಾಸ್ಟೆಲ್, ಹಾಸ್ಪಿಟಲ್ ಹಾಗೂ P.G ಗೆ ಯೋಗ್ಯವಾದ 15 ರೂಮ್ಸ್ ಮತ್ತು ಅಟ್ಯಾಚ್ ಬಾತ್‌ರೂಮ್ ಹಾಗೂ 1350 Sq ಮೀಟರ್ಸ್‌ನ ಡೈನಿಂಗ್ ಹಾಲ್ ಜೊತೆ ಕಿಚನ್.
Address: 6th Cross BIET College Road, Near Davan College, MCC B'Block, Davangere.
99725 35329, 79757 67308

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
P U C or any DEGREE.
ವಿಳಾಸ : ಕಾವೇರಿ ಫಾರ್ಮಾ, ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577002

**ಬಾಡಿಗೆಗೆ ಇದೆ**
ಪಿ. ಬಿ. ರಸ್ತೆ, ಹೊಂಡ ಕಾರ್ ಮತ್ತು ಬೈಕ್ ಶೋ ರೂಂ ಎದುರು 100 ಅಡಿ ದೂರದಲ್ಲಿ ಇರುವ 40 ಅಡಿ ರಸ್ತೆ, ಅಶ್ವಿನಿ ನರ್ಸಿಂಗ್ ಹೋಂ ಎದುರು 4000sq.ft ಇರುವ, 20 HP ವಿದ್ಯುತ್ ಇರುವ ಇಂಡಸ್ಟ್ರೀಯಲ್ ಶೆಡ್ ಬಾಡಿಗೆಗೆ ಇದೆ. ಸಂಪರ್ಕಿಸಿ: ಮಧು
94481 80019
98447 11299

**ಬೇಕಾಗಿದ್ದಾರೆ**
ಆಫೀಸ್ ರಿಸೆಪ್ಷನಿಸ್ಟ್ ಕೆಲಸಕ್ಕೆ ವಿವಾಹಿತ ಮಹಿಳೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್
# 24, RMC ಲಿಂಕ್ ರಸ್ತೆ, ವಿನಾಯಕ ಟಾಕೀಸ್ ಹತ್ತಿರ, ಬಂಬೂ ಬಜಾರ್ ದಾವಣಗೆರೆ.
63644 46777, 98800 05777

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
94487 51313

**ಮಾರಾಟಕ್ಕೆ**
ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45, ವಿನಾಯಕ ಬಡಾವಣೆ ಸೈಟ್ (ದಕ್ಷಿಣ) 30×40, ಸಿದ್ದವೀರಪ್ಪ ಬಡಾವಣೆ ಸೈಟ್ (ಪಶ್ಚಿಮ) 48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
78996 36597, 99165 25828

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಫೀಲ್ಡ್ M/F
ಟೆಲಿ ಕಾಲರ್ Female
ಟೈಲರ್ Female
ಅಂಗಡಿ ಸಹಾಯಕರು ಖಾಸಗಿ ಬಸ್ ನಿಲ್ದಾಣ ಮಳಿಗೆ ಸಂಖ್ಯೆ 88, ದಾವಣಗೆರೆ
78923 28599

**ಮನೆಗಳು ಮಾರಾಟಕ್ಕಿವೆ**
40x60 North, ಕುವೆಂಪು ಬಡಾವಣೆಯಲ್ಲಿ, 30x40 West, ಶಾಮನೂರಿನಲ್ಲಿ, 30x45 North, ಸಿದ್ದವೀರಪ್ಪ ಬಡಾವಣೆಯಲ್ಲಿ, 30x40 North KHBಯಲ್ಲಿ 35 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ವಯೋವೃದ್ಧರನ್ನು, ವಯೋವೃದ್ಧ ರೋಗಿಗಳನ್ನು ನೋಡಿಕೊಳ್ಳಲು ಬೇಕಾಗಿದ್ದಲ್ಲಿ ಸಂಪರ್ಕಿಸಿ:
99024 64522
96864 55820
(ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.)

**ಅಣಬೆಗಳು ದೊರೆಯುತ್ತವೆ**
ರಕ್ತದೊತ್ತಡ ಮತ್ತು ಡಯಾಬಿಟಿಸ್ ಹಾಗೂ ಹೃದಯ ಸಂಬಂಧಿರೋಗ ನಿಯಂತ್ರಣಕ್ಕೆ ಅಗತ್ಯ ಪೋಷಕಾಂಶಗಳುಳ್ಳ ಅಣಬೆಗಳು ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ದೊರೆಯುತ್ತವೆ. ಸಂಪರ್ಕಿಸಿ
08192 255433

**ಮನೆ ಮಾರಾಟಕ್ಕಿದೆ**
#2427/A,10th Main, 2nd Cross, M. C.C 'A' Block, Davangere-02. 60x30ft.
ಸಂಪರ್ಕಿಸಿ:
74835 88932
98454 58294

**ಸೈಟು ಮಾರಾಟಕ್ಕಿದೆ**
ಅಳತೆ 50x 80 ಬನಶಂಕರಿ ಬಡಾವಣೆ ಸೈಟ್ ನಂ. 8, # 4081 ಬೈಪಾಸ್, ಸಂಪರ್ಕಿಸಿರಿ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95380 55959

**House to Let**
East Faced Double Bed Room House (First floor) to let at S.S. Layout, "B" Block, Near Little Champs School, Davangere.
98456 99806, 91487 31686

**ಸೈಟು ಮಾರಾಟಕ್ಕಿದೆ**
25x40ಅಳತೆಯ 2 ಸೈಟುಗಳು ಆಂಜನೇಯ ದೇವಸ್ಥಾನ ರಸ್ತೆ, ನವತರಂಗ ಶಾಲೆ ಎದುರು, ಚಿಕ್ಕನಹಳ್ಳಿ, ಹೊಸ ಬಡಾವಣೆ ನಿಟುವಳ್ಳಿ, ದಾವಣಗೆರೆ.
86608 09919, 99019 26644

**ಬೇಕಾಗಿದ್ದಾರೆ**
ಐಷರ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಫೀಲ್ಡ್, ಟೀಮ್ ವರ್ಕ್ ಮಾಡಲು PUC/ ಡಿಗ್ರಿ (ಪಾಸ್/ಫೇಲ್) ಆದ ಯುವಕರು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನ, ಲೈಸೆನ್ಸ್ ಇದ್ದವರಿಗೆ ಮೊದಲ ಆದ್ಯತೆ. ಆಕರ್ಷಕ ಸಂಬಳ+Incentive +TA,DA ಕೊಡಲಾಗುವುದು.
ಸಂಪರ್ಕಿಸಿ :
ಶಾರದಾ ಆಟೋಸ್
KSRTC, ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಫೋ.: 63646 76457

**ಅಭ್ಯಂಗ ಮತ್ತು ಸ್ವೇದ**
ಕೂದಲಿನ ಚಿಕಿತ್ಸೆ, ಮುಖದ ಸೌಂದರ್ಯವರ್ಧಕ ಚಿಕಿತ್ಸೆ, ನರ ದೌರ್ಬಲ್ಯ ಚಿಕಿತ್ಸೆ, ಆಕ್ಯೂಪಂಕ್ಚರ್ ಚಿಕಿತ್ಸೆ, ಇನ್ನು ಹತ್ತು ಹಲವು ಚಿಕಿತ್ಸೆಗೆ ಇಂದೇ ಸಂಪರ್ಕಿಸಿ.
ಅನ್ವಯ ಆಯುರ್ವೇದ ಆಸ್ಪತ್ರೆ
08192-252228, 8618642929

**ತಕ್ಷವೇ ಬೇಕಾಗಿದ್ದಾರೆ**
ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡಲು ರಾತ್ರಿ ಮತ್ತು ಹಗಲು ಕಾವಲುಗಾರರು, (Night & Day Security). ಹೊಲದಲ್ಲಿ ಕೆಲಸ ಮಾಡಲು, Asst Cook (Male), Dhobi (Male) ತಕ್ಷಣವೇ ಬೇಕಾಗಿದ್ದಾರೆ.
ಆಸಕ್ತರು ತಕ್ಷಣವೇ ಸಂಪರ್ಕಿಸಿ
96207 68987, 76250 78022

**HOME LOANS 7% INTEREST**
+ House Purchase Loans
+ House Constrcution Loans
+ House Mortgage Loan + Top up Loans
+ House Loan Takeover + Site Purchase Loans
+ Commercial Building Loans
+ any Housing loan + Business Loans
Contact : 98455 87805

**WANTED**
Marketing Persons (own vehicle)
Qualification: Degree,
Experience: 3-4 Years,
Salary: 10-15+ Incentive.
RSR Enterprises.
81472 75735, 77951 44285

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಪ್ಲೈವುಡ್ ಹಾಗೂ ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
98865 11185

**ಬೇಕಾಗಿದ್ದಾರೆ**
ಸೇಲ್ಸ್ ಮ್ಯಾನ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
ಪ್ರಕಾಶ್ ಕಾಫಿ ವರ್ಕ್ಸ್, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
94823 73289

**ಬೇಕಾಗಿದ್ದಾರೆ**
ದಾವಣಗೆರೆಯ ವೆಜ್ / ನಾನ್ ವೆಜ್ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ.
1) ಮ್ಯಾನೇಜರ್ (ಪುರುಷರು)
2) ಕಿಚನ್ ಸೂಪರ್‌ವೈಸರ್ (ಪುರುಷರು)
3) ಕ್ಲೀನರ್‌ಗಳು (ಪುರುಷರು/ಮಹಿಳೆಯರು)
ಆಕರ್ಷಕ ವೇತನ , ಪರಸ್ಥಳದವರಿಗೆ ವಸತಿ ಸೌಲಭ್ಯ ನೀಡಲಾಗುವುದು.
ಸಂಪರ್ಕಿಸಿ :
70224 60137
98863 14000

**WANTED**
Customer Relationship Manager (CRM)
- Excellent Interpersonal & communication skills.
- Proficient in all Microsoft applications.
- Superior product knowledge.
- A team player with leadership skills.
- Maintain a positive attitude focused on customer satisfaction.
(Male Candidates Only)
Age Limit : Below 45
Note: Experience Candidates Only
Good Salary (ESI,PF + Incentive)
SRINIVASA HONDA
Ph No : 9844298506

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
Qualification: D.Ed, BA, B.Ed, B.Sc/M.Sc, B.Ed, MA, B.Ed (English).
Contact
9008 684804, 96321 01972

**LADY TEACHERS WANTED**
B.Ed- 2 Posts, D.Ed - 2 Posts, Degree -3 Posts, NTC - 2 Posts
Contact: Vidya Vikas Convent
Mothi Doddappa Layout, 18th Cross, KTJ Nagar, DVG
M: 99866 17235

**ತಕ್ಷಣ ಹೆಣ್ಣು ಮಕ್ಕಳು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ವಯಸ್ಸಾದ ಪೇಷೆಂಟ್‌ನ್ನು ನೋಡಿಕೊಂಡು ಮನೆ ಕೆಲಸ, ಅಡುಗೆ ಮಾಡುವಂತಹ, ಶ್ರದ್ಧೆವುಳ್ಳ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. (ಬೆಳಿಗ್ಗೆ 8.30 ರಿಂದ ಸಂಜೆ 6 ಗಂಟೆವರೆಗೆ ಮಾತ್ರ) ತಕ್ಷಣ ಸಂಪರ್ಕಿಸಿರಿ:
94496 79324

# ರಸ್ತೆ ಗುಂಡಿಗಳನ್ನು ಮುಚ್ಚಿದ ಸಂಚಾರಿ ಪೊಲೀಸ್



ದಾವಣಗೆರೆ, ನ.24- ಕರ್ತವ್ಯ ನಿರತ ಸಂಚಾರಿ ಪೊಲೀಸ್ ಸಿಬ್ಬಂದಿಯೋರ್ವರು ಪ್ರಮುಖ ವೃತ್ತದಲ್ಲಿನ ಗುಂಡಿಗಳನ್ನು ಮುಚ್ಚುವ ಕಾಯಕ ಮಾಡುವ ಮುಖೇನ ಸಾಮಾಜಿಕ ಕಾಳಜಿ ಮೆರೆದಿದ್ದು, ಇವರ ಈ ಕಾರ್ಯಕ್ಕೆ ಜನ ಮೆಚ್ಚುಗೆ ವ್ಯಕ್ತವಾಗಿದೆ.

ವಾಹನಗಳ ಮೇಲೆ ನಿಗಾವಹಿಸಿ, ಸಂಚಾರ ನಿಯಮ ಉಲ್ಲಂಘಿಸದಂತೆ ನೋಡಿಕೊಳ್ಳುವ ಮೂಲಕ ಸಾರ್ವಜನಿಕರ ಜೀವ ರಕ್ಷಿಸುವ ಕರ್ತವ್ಯದ ಜೊತೆಯಲ್ಲೇ ವಾಹನಗಳ ಸವಾರರಿಗೆ ಸುಗಮ ಸಂಚಾರದ ದೃಷ್ಟಿಯಿಂದ ನಗರದ ಗುಂಡಿ ಮಹಾದೇವಪ್ಪ ವೃತ್ತದಲ್ಲಿನ ಗುಂಡಿಗಳನ್ನು ಜೆಲ್ಲಿ ಕಲ್ಲು ಹಾಕಿ ಮುಚ್ಚುವ ಮುಖೇನ ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಪೊಲೀಸ್ ಕಾನ್‌ಸ್ಟೇಬಲ್ ಎಸ್. ಹೇಮಣ್ಣ ಸಾಮಾಜಿಕ ಕಾಳಜಿಯ ಸೇವಾ ಕಾರ್ಯವನ್ನು ಮಾಡಿದ್ದಾರೆ.

## ನಗರದಲ್ಲಿಂದು ಮಾಂಸ ಮಾರಾಟ ನಿಷೇಧ

ಟಿ.ಎಲ್ ವಾಸ್ವಾನಿಯವರ ಜಯಂತಿ ಪ್ರಯುಕ್ತ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟ ನಿಷೇಧಿಸಲಾಗಿದೆ. ಮಾಂಸದ ಉದ್ದಿಮೆ ನಡೆಸುತ್ತಿರುವ ಉದ್ದಿಮೆ ದಾರರು ಮಾಂಸ ಮಾರಾಟ ಮಾಡಬಾರದು

## ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿಗಿಂದು ಸಂಸದ ಸಿದ್ದೇಶ್ವರ

ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ ಭಾರೀ ಮಳೆಯಿಂದಾಗಿ ಬೆಳೆ ಹಾನಿಯಾದ ಬನ್ನಿಕೋಡು, ಕೂಲಂಬಿ, ನೆಲಹೊನ್ನೆ, ಕುಂದೂರು, ನೇರಲಗುಂಡಿ, ಬೇಲಿಮಲ್ಲೂರು, ದೊಡ್ಡೆತ್ತಿನಹಳ್ಳಿ, ಕುಂಕುವ, ಬೀಜೋಗಟ್ಟೆ ಮತ್ತು ಕುರುವ ಗ್ರಾಮಗಳಿಗೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ12ರಿಂದ ಸಂಜೆ 4ರವರೆಗೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ.

# ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಲಿಗೆ : ಇಬ್ಬರ ಬಂಧನ

## ಹಳೇಬಾತಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿಳಾಸ ಕೇಳುವ ನೆಪದಲ್ಲಿ ದರೋಡೆ

ದಾವಣಗೆರೆ, ನ.24- ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಲಿಗೆ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಿರುವ ಪೊಲೀಸರು ಸುಲಿಗೆ, ಮನೆಗಳ್ಳತನ ಸೇರಿ ಒಟ್ಟು 7 ಪ್ರಕರಣಗಳನ್ನು ಪತ್ತೆ ಮಾಡಿದ್ದಾರೆ.



ಕಳೆದ ಅಕ್ಟೋಬರ್ 14, 2021ರ ರಾತ್ರಿ ಮಂಜುನಾಥ ಅವರ ಕುಟುಂಬ ಮಲೇಬೆನ್ನೂರಿನಿಂದ ಕಾರಿನಲ್ಲಿ ದಾವಣಗೆರೆಗೆ ಬರುತ್ತಿರುವಾಗ ಹಳೇಬಾತಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ಕಾರಿನಲ್ಲಿ ಬಂದ ನಾಲ್ವರು ಅಡ್ಡ ಹಾಕಿ ಬಂಗಾರದ ಆಭರಣ ಮತ್ತು ಎರಡು ಮೊಬೈಲ್, ವ್ಯಾನಿಟಿ ಬ್ಯಾಗ್ ಮತ್ತು ಪರ್ಸ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಲ್ಲದೇ, ಅಕ್ಟೋಬರ್ 27, 2021 ರಂದು ಅದೇ ಜಾಗದಿಂದ ಹಿಂದೆ ಆಪೆ ಗೂಡ್ಸ್ ಆಟೋದವನಿಗೆ ಬೆಂಗಳೂರು ದಾರಿ ಯಾವ ಕಡೆ ಎಂದು ವಿಳಾಸ ಕೇಳುವ ನೆಪದಲ್ಲಿ ಹರಿಹರದ ಪಕ್ಕೀರೇಶ್ ನಾಗೇನಹಳ್ಳಿ ಅವರನ್ನು ಬಲವಂತಾಗಿ ಎಳೆದುಕೊಂಡು ಕಾರಿನಲ್ಲಿ ಹಾಕಿಕೊಂಡು ಹೋಗಿ ಚಾಕು ತೋರಿಸಿ ಮೊಬೈಲ್ ಮತ್ತು 5 ಸಾವಿರ ನಗದು ಕಿತ್ತುಕೊಂಡು ಹಾಲುವರ್ತಿ ಹೈವೇ ಮೇಲೆ ಬಿಟ್ಟು ಹೋಗಿದ್ದರು.

ಈ ಬಗ್ಗೆ ತನಿಖೆ ಕೈಗೊಂಡು ಆರೋಪಿಗಳ ಪತ್ತೆಗಾಗಿ ದಾವಣಗೆರೆ ಗ್ರಾಮಾಂತರ ಉಪ-ವಿಭಾಗದ ಸಹಾಯಕ ಪೊಲೀಸ್ ಅಧೀಕ್ಷಕರಾದ ಕನಿಕಾ ಸಿಕ್ರಿವಾಲ್ ಮಾರ್ಗದರ್ಶನದಲ್ಲಿ ಪಿಐ ಲಿಂಗನಗೌಡ ನೆಗಳೂರು ನೇತೃತ್ವದ ತಂಡ ಇಬ್ಬರನ್ನು ಬಂಧಿಸಿದ್ದು, ದಾವಣಗೆರೆ ಗ್ರಾಮಾಂತರ ಠಾಣೆಯ 2 ಸುಲಿಗೆ ಪ್ರಕರಣಗಳು ಸೇರಿದಂತೆ 4 ಮನೆಗಳ್ಳತನ, 1 ಸಾಮಾನ್ಯ ಕಳ್ಳತನ ಪ್ರಕರಣಗಳನ್ನು ಪತ್ತೆ ಮಾಡಿ, 8 ಲಕ್ಷ ಮೌಲ್ಯದ 200 ಗ್ರಾಂ ತೂಕದ ಬಂಗಾರ ಮತ್ತು ಬೆಳ್ಳಿಯ ಆಭರಣಗಳು ಹಾಗೂ 2 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ. ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪಿಎಸ್‌ಐಗಳಾದ ಪುಷ್ಪಲತಾ, ಹೆಚ್.ಕೆ. ಲಕ್ಷ್ಮಣ, ಅಶ್ವಿನ್ ಕುಮಾರ್ ಹಾಗೂ ಸಿಬ್ಬಂದಿಗಳಾದ ಜೋವಿತ್ ರಾಜ್, ದೇವೇಂದ್ರನಾಯ್ಕ, ನಾಗರಾಜಯ್ಯ, ಅಣ್ಣಯ್ಯ, ನಾಗೇಶ್ ನಾಯ್ಕ, ರಾಜಶೇಖರ್, ರಾಘವೇಂದ್ರ, ಶಾಂತಕುಮಾರ, ನೂರುಲ್ಲಾ ಷರೀಫ್ ಪ್ರಕರಣ ಬೇಧಿಸುವ ಕಾರ್ಯದಲ್ಲಿ ಭಾಗವಹಿಸಿದ್ದರು.

## ರಾಣೇಬೆನ್ನೂರಿಗೆ 27ರಂದು ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ



ರಾಣೇಬೆನ್ನೂರು, ನ.24- ಕೊಪ್ಪಳ ಗವಿಮಠದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮೀಜಿ ಹಾಗೂ ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಇದೇ ದಿನಾಂಕ 27 ರ ಶನಿವಾರ ವರ್ತಕರ ಸಂಘದ ಅಮೃತ ಮಹೋತ್ಸವ ಜರುಗಲಿದೆ ಎಂದು ಸಂಘದ ಅಧ್ಯಕ್ಷ ಸದಾನಂದ ಉಪ್ಪಿನ ತಿಳಿಸಿದ್ದಾರೆ.

ಸಚಿವ ಬಿ.ಸಿ. ಪಾಟೀಲ್, ಎಸ್.ಟಿ. ಸೋಮಶೇಖರ್, ಸಂಸದ ಶಿವಕುಮಾರ ಉದಾಸಿ, ಶಾಸಕರಾದ ಅರುಣಕುಮಾರ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ನೆಹರು ಓಲೇಕಾರ, ಶ್ರೀನಿವಾಸ ಮಾನೆ, ಆರ್.ಶಂಕರ್, ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ, ಮಾಜಿ ಶಾಸಕ ಡಾ. ಬಿ.ಜಿ.ಪಾಟೀಲ ಅತಿಥಿಗಳಾಗಿರುವರು.

ಹಾವೇರಿ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಎಂ.ವಿ. ಹೊಂಬರಡಿ, ನೆಹರು ಮಾರ್ಕೆಟ್ ಸಂಘದ ಅಧ್ಯಕ್ಷ ಅಶೋಕ ಗಂಗನಗೌಡ್ರ, ಎಪಿಎಂಸಿ ವರ್ತಕರ ಪ್ರತಿನಿಧಿ ಜಟ್ಟೆಪ್ಪ ಕರೇಗೌಡ್ರ, ಮಾರುಕಟ್ಟೆ ಕಾರ್ಯದರ್ಶಿ ಆದಪ್ಪ ಭಾಗವಹಿಸುವರು.

ಸಮಾರಂಭ ನಡೆಯುವ ಎಪಿಎಂಸಿ ಸಮುದಾಯ ಭವನದಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಪಾಂಡಪ್ಪ ಮಾಳೋದೆ, ಜ.ಜಿ. ಹೊಟ್ಟಿಗೌಡ್ರ, ಉಮೇಶ ಹೊನ್ನಾಳಿ, ಎಂ.ವಿ.ಹೊಂಬರಡಿ ಮತ್ತಿತರರಿದ್ದರು.

# ನಗರದಲ್ಲಿ ರಿಯಾಯಿತಿ ಮಾರಾಟ ಮೇಳ



ದಾವಣಗೆರೆ, ನ.24- ನೇರವಾಗಿ ಮಿಲ್‌ಗಳ ದರದಲ್ಲಿ ಗ್ರಾಹಕರಿಗೆ ಒದಗಿಸಬೇಕೆಂಬ ಸದುದ್ದೇಶದಿಂದ ಭಾರೀ ರಿಯಾಯಿತಿಯಲ್ಲಿ ಸಿದ್ದ ಉಡುಪುಗಳ ಮಾರಾಟ ಮೇಳವು ನಗರದ ಗುರುಭವನದಲ್ಲಿ ನಡೆಯುತ್ತಿದ್ದು, ಕೆಲವೇ ದಿನ ಮುಂದುವರೆಯಲಿದೆ.

ರಿಲಿಯನ್ಸ್ ಮೇಕ್ಸ್ ವೇರೈಟಿ ಶರ್ಟ್ ಮತ್ತು ಟೀ ಶರ್ಟ್‌ಗಳು ಕೇವಲ 350 ರೂ. ರಿಂದ 400 ರೂ. ವರೆಗೆ ಹೊಸ ಸ್ಟಾಕ್‌ನೊಂದಿಗೆ ದೊರೆಯುತ್ತವೆ.

ಮಕ್ಕಳು, ಯುವಕರು, ಪುರುಷರು, ವಯೋವೃದ್ದರು, ಹೀಗೆ ಎಲ್ಲಾ ವರ್ಗದವರಿಗೂ ಅಗತ್ಯವಿರುವ ರೇಮಂಡ್, ಪಾರ್ಕ್ ಅವೆನ್ಯೂ, ಲೀ, ಕಲರ್‌ಪ್ಲಸ್, ರೂಟ್ಸ್ ಮುಂತಾದ ಕಂಪನಿಗಳ ಉಡುಪುಗಳ ದಾಸ್ತಾನು ಇಲ್ಲಿದೆ. ಬ್ರಾಂಡೆಡ್ ಬ್ರಾ ಹಾಗೂ ಪ್ಯಾಂಟೀಸ್‌ಗಳು ದೊರೆಯಲಿವೆ.

ಜೆಂಟ್ಸ್ ಪ್ಯಾಂಟ್, ನೆಟೆಡ್ ಕಾಟನ್ ಸ್ಟ್ರೆಚ್, ಮಸ್ಕರೈಸ್ ಕಾಟನ್ ಸ್ಟ್ರೆಚ್, ಸಾಟಿನ್, ಸಿಲ್ಕಿ, ಡಾಬಿ ಕಾಟನ್ ಸ್ಟ್ರೆಚ್, ಕಂಪರ್ಟ್ ಫಿಟ್, ನ್ಯಾರೋ, ಪೆನ್ಸಿಲ್, ರಿಲ್ಯಾಕ್ಸ್‌ಡ್, ಕ್ಯಾಷುಯಲ್ ಫಿಟ್ ಪ್ಯಾಂಟ್, ಕಿಡ್ಸ್ ಪ್ಯಾಂಟ್‌ಗಳು, ದೊರೆಯುತ್ತವೆ. ಟೀ ಶರ್ಟ್, ಲೋಯರ್ ಬರ್ಮುಡಾ, ಟಾಫ್, ಕೇಪ್ರೀ, ಲೇಡಿಸ್ ಪೈಜಾಮ್, ಬಾಬಾ ಸೂಟ್, ಫ್ಯಾನ್ಸಿ ಕಿಡ್ಸ್ ಡ್ರೆಸ್, ಸ್ಕಾರಿ, ಕುರ್ತೀಸ್ ಮುಂತಾದವು 150 ರೂ. ರಿಂದ 350 ರೂ.ಗಳಲ್ಲಿ ಸಿಗುತ್ತವೆ.

50 ಸಾವಿರ ಬಗೆಯ ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳು ಇಲ್ಲಿ ಲಭ್ಯವಿವೆ. 200-300 ರೂ.ಗೆ ಬ್ರಾಂಡೆಡ್ ಬ್ರಾ ಮತ್ತು ಪ್ಯಾಂಟೀಸ್, ಬ್ರಾಂಡೆಡ್ ಡಿಸೈನರ್ ಕುರ್ತಿಗಳಾದ ಮೆಂಟ್ ಗ್ರೀನ್ ಕಾಟನ್, ಎಕ್ಸಲೆಂಟ್ ಪಾರ್ಟಿವೇರ್, ಬ್ಲಾಕ್ ಪ್ರಿಂಟೆಡ್ ಕಾಟನ್ ಲಾಂಗ್, ಫ್ಯಾನ್ಸಿ ಲೇಟೆಸ್ಟ್ ಡಿಸೈನರ್ ಕುರ್ತಗಳು 400-599 ರೂ.ಗೆ ಲಭ್ಯವಿವೆ. ರಾಜಸ್ತಾನ ರಾಯಲ್ ಪ್ರಿಂಟ್ ಬೆಡ್‌ಶೀಟ್‌ಗಳು ಲಭ್ಯವಿವೆ.

## ನಿಟುವಳ್ಳಿಯಲ್ಲಿ ಇಂದು ಶಿವ ಚಿದಂಬರೇಶ್ವರ ಜಯಂತ್ಯೋತ್ಸವ



ನಿಟುವಳ್ಳಿಯ ಶ್ರೀ ಶಿವ ಚಿದಂಬರ ಕ್ಷೇತ್ರದಲ್ಲಿ ಶ್ರೀ ಶಿವಚಿದಂಬರ ಸೇವಾ ಸಂಘ ಭಕ್ತ ಮಂಡಳಿ, ಶ್ರೀ ಶಿವಚಿದಂಬರ ದಿಂಡಿ ದಾವಣಗೆರೆ ಇವರಿಂದ ಶ್ರೀ ಶಿವಚಿದಂಬರ ಜಯಂತ್ಯೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಂಗವಾಗಿ ಇಂದು ಶ್ರೀ ಶಿವ ಚಿದಂಬರ ಜಯಂತ್ಯೋತ್ಸವ ಜರುಗಲಿದೆ. ಸಂಸ್ಥಾಪಕ ಗೌರವ ಅಧ್ಯಕ್ಷರಾದ ವಿ. ಮೋಹನ್ ದೀಕ್ಷಿತರ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮ ನಡೆಯುವುದು. ಅಂದು ಪ್ರಾತಃಕಾಲ 5 ಗಂಟೆಗೆ ಕಾಕಡಾರತಿ, ಪ್ರಾತಃ ಸ್ಮರಣೆ, ಬೆಳಿಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಪೂಜೆ ಹಾಗೂ ಬೆಳಿಗ್ಗೆ 8 ಗಂಟೆಗೆ ಸ್ವಸ್ತಿ ಪುಣ್ಯಾಹ ವಾಚನ, ಕಲಾ ಹೋಮ ರುದ್ರ ಸ್ವಾಹಕಾರ, ಪೂರ್ಣಾಹುತಿ ನಡೆಯುವುದು.

ಬೆಳಿಗ್ಗೆ 10 ಗಂಟೆಗೆ ಪ್ರವಚನ ಕಥಾನಿರೂಪಣೆ ಶ್ರೀ ಶಿವ ಚಿದಂಬರ ಮಹಿಳಾ ಮಂಡಳಿಯಿಂದ, ಬೆಳಿಗ್ಗೆ 11.15 ಕ್ಕೆ ಶ್ರೀ ಶಿವ ಚಿದಂಬರೇಶ್ವರರ ತೊಟ್ಟಿಲೋತ್ಸವ, ವೈದಿಕ ವೃಂದ ಪೂಜೆ, ಜನ್ಮಾರತಿ, ಸುಹಾಸಿನಿಯರಿಗೆ ಉಡಿ ತುಂಬುವುದು ಇತ್ಯಾದಿ.

ಮಧ್ಯಾಹ್ನ 12.30 ಕ್ಕೆ ಸಾಮೂಹಿಕ ಭಜನೆ, ವೇದ ಘೋಷಣೆಯೊಂದಿಗೆ ಪಲ್ಲಕ್ಕಿ ಉತ್ಸವ, ಮಧ್ಯಾಹ್ನ 2.30 ಕ್ಕೆ ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ. ಸಂಜೆ 6.30 ಕ್ಕೆ ಸಾಂಪ್ರದಾಯಿಕ ಭಜನೆ ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯುವುದು.

## ಮಸೂದೆಗೆ ಸಂಪುಟ ಸಮ್ಮತಿ

(1ನೇ ಪುಟದಿಂದ) ವಲಯದಲ್ಲಿ ಸುಧಾರಣೆ ತರುವುದಕ್ಕಾಗಿ ಮಸೂದೆಗಳನ್ನು ರೂಪಿಸಲಾಗಿತ್ತು.ಸಂಪುಟ ಸಭೆಯ ನಂತರ ಮಾತನಾಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದು ನಮ್ಮ ಮೊದಲ ಆದ್ಯತೆಯಾಗಿರಲಿದೆ ಎಂದಿದ್ದಾರೆ. ನವೆಂಬರ್ 29ರಿಂದ ಅಧಿವೇಶನ ಆರಂಭವಾಗಲಿದೆ.

## ವಿದ್ಯಾಭ್ಯಾಸ ಸಾಲಕ್ಕಾಗಿ ಅರ್ಜಿ

ದಾವಣಗೆರೆ, ನ.24- ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್‌ನಲ್ಲಿ ಆಯ್ಕೆಯಾದ ವೈದ್ಯಕೀಯ (ಎಂ.ಬಿ.ಬಿ.ಎಸ್), ಬಿ.ಡಿ.ಎಸ್, ನೀಟ್, ಬಿ.ಟೆಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್ ಮತ್ತು ಆಯುಷ್ ಪದವಿ ಕೋರ್ಸ್‌ಗಳಲ್ಲಿ ಆಯ್ಕೆಯಾದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ರಿನೀವಲ್ ಸಾಲ ಯೋಜನೆಯಡಿ ಸಾಲ ಪಡೆಯಲಿಚ್ಛಿಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಈ ಹಿಂದಿನ ವರ್ಷದಲ್ಲಿ ನಿಗಮದಿಂದ ಪಡೆದಿರುವ ಒಟ್ಟು ಸಾಲದ ಬಾಕಿಯ ಮೊತ್ತದ ಶೇ.12 ರಷ್ಟನ್ನು ಆಯಾ ಜಿಲ್ಲಾ ಕಚೇರಿಗಳಲ್ಲಿ ಪಾವತಿಸಿರಬೇಕು. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳವರು ಡಿಸೆಂಬರ್ 20 ರೊಳಗಾಗಿ ನಿಗಮದ ವೆಬ್‌ಸೈಟ್ kmdconline.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಜಿಲ್ಲಾ ವ್ಯವಸ್ಥಾಪಕರ ಕಚೇರಿ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ – 577002 ಇವರಿಗೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-232349 ಸಂಪರ್ಕಿಸಬಹುದು.

# ಭಿಕ್ಷೆ ಬೇಡುವ, ಬಾಲಕಾರ್ಮಿಕ ಮಕ್ಕಳ ರಕ್ಷಣೆಗೆ ವಿಶೇಷ ಅಭಿಯಾನ

ದಾವಣಗೆರೆ, ನ.24- ನಗರ ವ್ಯಾಪ್ತಿಯಲ್ಲಿ ಕಂಡು ಬರುವ ಚಿಂದಿ ಆಯುವ, ಬೀದಿ ಸುತ್ತುವ, ಭಿಕ್ಷೆ ಬೇಡುವ ಮಕ್ಕಳು ಹಾಗೂ ಬಾಲಕಾರ್ಮಿಕ ಮಕ್ಕಳನ್ನು ರಕ್ಷಿಸಲು ಇಂದಿನಿಂದ ಬರುವ ಡಿಸೆಂಬರ್ 5 ರವರೆಗೆ ವಿಶೇಷ ಅಭಿಯಾನ ಕೈಗೊಳ್ಳಲಾಗಿದ್ದು, ಈ ಅವಧಿಯಲ್ಲಿ ನಗರದ ಎಪಿಎಂಸಿ, ಬಸ್ ನಿಲ್ದಾಣ, ನಿಟುವಳ್ಳಿ, ಹದಡಿ ರಸ್ತೆ, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಬಿ ರಸ್ತೆಗಳಲ್ಲಿ ಅನಿರೀಕ್ಷಿತ ದಾಳಿ ಮಾಡುವುದರ ಮೂಲಕ ಸಂಕಷ್ಟದಲ್ಲಿರುವ ಮಕ್ಕಳನ್ನು ರಕ್ಷಿಸಿ, ಪುನರ್ವಸತಿ ಕಲ್ಪಿಸಿಕೊಡಲಾಗುವುದು.

ನಗರದಲ್ಲಿ ನಿನ್ನೆ ಇಂತಹ 13 ಗಂಡು ಮಕ್ಕಳು ಹಾಗೂ 1 ಹೆಣ್ಣು ಮಗುವನ್ನು ರಕ್ಷಣೆ ಮಾಡಲಾಗಿದ್ದು, ಅವರನ್ನು ಬಾಲಕರ ಸರ್ಕಾರಿ ಬಾಲಮಂದಿರ ಮತ್ತು ಬಾಲಕಿಯರ ಸರ್ಕಾರಿ ಬಾಲಮಂದಿರಕ್ಕೆ ರಕ್ಷಣೆ ಮತ್ತು ಪೋಷಣೆಗಾಗಿ ಬಿಡಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಈ ಅಭಿಯಾನ ಏರ್ಪಾಡಾಗಿದೆ.

## ಲ್ಯಾಬ್ ನಲ್ಲಿ ಅಗ್ನಿ ಅವಘಡ

ದಾವಣಗೆರೆ, ನ.24- ಯುಪಿಎಸ್‌ನಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವ ಘಟನೆ ನಗರದ ಜೈನ್ ಲ್ಯಾಬ್‌ನಲ್ಲಿ ನಡೆದಿದೆ. ಸ್ಥಳಕ್ಕೆ ಅಗ್ನಿ ಶಾಮಕ ದಳದ ಸಿಬ್ಬಂದಿ ಆಗಮಿಸುವಷ್ಟರಲ್ಲಿ ಬೆಂಕಿ ನಂದಿ ಹೋಗಿತ್ತು. ಆದರೆ, ರಸ್ತೆಯಲ್ಲಿ ದಟ್ಟ ಹೊಗೆ ತುಂಬಿತ್ತು. ಬಳಿಕ ನಿಟ್ಟುಸಿರು ಬಿಟ್ಟಿದ್ದಾರೆ. ಘಟನೆ ಯಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಹೇಳಲಾಗಿದೆ.

# ದೇವರಬೆಳಕೆರೆ ಪಿಕಪ್ ಜಲಾಶಯಕ್ಕೆ ಮಾನವ ಚಾಲಿತ ಗೇಟ್‌ಗೆ ಪ್ರಸ್ತಾವನೆ

(1ನೇ ಪುಟದಿಂದ) ಇಇ ಸಂತೋಷ್ ಅವರು ಭದ್ರಾ ನಾಲಾ ನಂ-3 ಇಇ ಚಿದಂಬರ್‌ಲಾಲ್ ಅವರಿಗೆ ಪ್ರಸ್ತಾವನೆ ಕೊಟ್ಟಿದ್ದೇನೆಂದು ಹೇಳಿದ್ದಾರೆ. ನನಗೆ ಪ್ರಸ್ತಾವನೆ ಬಂದ ತಕ್ಷಣ ಅನುದಾನ ಕೋರಿ ಮೇಲಾಧಿಕಾರಿಗಳಿಗೆ ಪತ್ರ ಬರೆಯುತ್ತೇನೆ ಎಂದು ಚಂದ್ರಹಾಸ್ ತಿಳಿಸಿದರು.



**ತಡೆಗೋಡೆ ಬಿರುಕು ಬಿಟ್ಟಿರುವುದರಿಂದ ಜಲಾಶಯಕ್ಕೆ ಯಾವುದೇ ತೊಂದರೆ ಇಲ್ಲ.**
**- ಇಂಜಿನಿಯರ್ ಚಂದ್ರಹಾಸ್ ಸ್ಪಷ್ಟನೆ**

**ಹಳೆ ಬಿರುಕು :** ಜಲಾಶಯದ ಕಲ್ಲಿನ ತಡೆಗೋಡೆ ಬಿರುಕು ಬಿಟ್ಟಿರುವುದು ಈಗ ಆಗಿರುವುದಲ್ಲ, ಅದು ಮೊದಲೇ ಇತ್ತು. ಇದರಿಂದ ಜಲಾಶಯಕ್ಕೆ ಯಾವುದೇ ತೊಂದರೆ ಇಲ್ಲ. ಈ ಬಗ್ಗೆ ರೈತರಿಗೆ ಆತಂಕ ಬೇಡ ಎಂದು ಅಧೀಕ್ಷಕ ಇಂಜಿನಿಯರ್ ಚಂದ್ರಹಾಸ್ ಸ್ಪಷ್ಟಪಡಿಸಿದರು.

ಈ ವೇಳೆ ಹಾಜರಿದ್ದ ಗ್ರಾಮದ ಜೆಡಿಎಸ್ ಮುಖಂಡ ಕರಿಬಸಪ್ಪ ಅವರು, ಕಲ್ಲಿನ ತಡೆಗೋಡೆ ಬಿರುಕು ಬಿಟ್ಟಿರುವುದು ಬಹಳ ದಿನಗಳಿಂದಲೂ ಇದೆ. ಆದರೆ ಕೆಲವರು ಈಗ ಇದನ್ನೇ ದೊಡ್ಡದಾಗಿ ಬಿಂಬಿಸುತ್ತಿದ್ದಾರೆಂದು ಬೇಸರ ವ್ಯಕ್ತಪಡಿಸಿದರು.

ಎಇಇ ಸಂತೋಷ್ ಕೂಡಾ ಮಾತನಾಡಿ, ಜಲಾಶಯ ಸುರಕ್ಷಿತವಾಗಿದೆ. ತಡೆಗೋಡೆ ಬಿರುಕು ಬಿಟ್ಟಿರುವುದನ್ನು ದುರಸ್ತಿ ಮಾಡುತ್ತೇವೆ.

ಜಲಾಶಯದ ಗೇಟ್ ಬಳಿ ನಿಂತಿರುವ ಜಲ ಸಸ್ಯರಾಶಿಯನ್ನು ಶಾಸಕರೇ ಇಟಾಚಿ ತರಿಸಿ ತೆರವು ಮಾಡಿಸುವ ಕೆಲಸ ಮಾಡಿಸುತ್ತಿದ್ದಾರೆ. ಈ ಕೆಲಸ ಮಾಡಿಸಲು ತಕ್ಷಣಕ್ಕೆ ನಮ್ಮ ಬಳಿ ಅನುದಾನ ಇಲ್ಲ ಎಂದು ಸ್ಪಷ್ಟಪಡಿಸಿದರು.

3 ದಿನಗಳಿಂದ ತೆರವು ಕಾರ್ಯಾಚರಣೆ ನಡೆಯುತ್ತಿದ್ದರೂ ಹಿಂದಿನಿಂದ ಸಸ್ಯರಾಶಿ ಹರಿದು ಬಂದು ನಿಲ್ಲುತ್ತಿದೆ. ಇದನ್ನು ಪೂರ್ತಿಯಾಗಿ ತೆಗೆಯಲು ಇನ್ನೂ ಒಂದು ವಾರ ಸಮಯ ಬೇಕಾಗಬಹುದೆಂದು ಎಇಇ ಸಂತೋಷ್ ತಿಳಿಸಿದರು.

ಸಂಕ್ಲೀಪುರ ಗ್ರಾಮದ ಜಿ.ಎಂ. ನಿಂಗಪ್ಪ ಅವರು, ಶಾಸಕ ರಾಮಪ್ಪ ಅವರು ಈ ಭಾಗದ ರೈತರಿಗೆ ಕೊಟ್ಟ ಮಾತಿನಂತೆ ಕೆಲಸ ಮಾಡಿಸುತ್ತಿರುವುದರಿಂದ ನಮ್ಮ ಬೆಳೆಗಳು ಉಳಿದುಕೊಂಡಿವೆ ಎಂದರು.

ಇದೇ ಸಂದರ್ಭದಲ್ಲಿ ದಿನಗೂಲಿ ನೌಕರರು 5 ತಿಂಗಳ ಬಾಕಿ ವೇತನ ಕೊಡಿಸುವಂತೆ ಶಾಸಕ ರಾಮಪ್ಪ ಅವರ ಕಾಲು ಹಿಡಿದರು. ಆಗ ಶಾಸಕರು ಸ್ಥಳದಲ್ಲಿದ್ದ ಇಇ ಚಿದಂಬರ್‌ಲಾಲ್ ಅವರನ್ನು ತರಾಟೆಗೆ ತೆಗೆದುಕೊಂಡು, ಕಳೆದ ಒಂದು ತಿಂಗಳಿನಿಂದ ನೀವು ಇವರಿಗೆ ವೇತನ ಕೊಡಿಸಲು ಸತಾಯಿಸುತ್ತಿದ್ದೀರಾ? ಎಂದು ಪ್ರಶ್ನಿಸಿದಾಗ ಮಧ್ಯ ಪ್ರವೇಶಿಸಿದ ಚಂದ್ರಹಾಸ್ ಅವರು, ತಕ್ಷಣಕ್ಕೆ ಎಸ್‌ಇ ಅವರಿಗೆ ಸ್ವಲ್ಪ ವೇತನ ನೀಡಲು ಸೂಚಿಸಿ ಸಮಾಧಾನ ಪಡಿಸಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಕೆ.ಪಿ. ಗಂಗಾಧರ್, ಎ. ಆರೀಫ್ ಅಲಿ, ದಾದಾವಲಿ, ಗ್ರಾಮದ ಶೇಖರಪ್ಪ, ಮಹೇಶ್ವರಪ್ಪ, ಸಂಕ್ಲೀಪುರದ ಸೋಮಶೇಖರ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

**ಡಿಸಿ ಭೇಟಿ :** ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಬುಧವಾರ ಸಂಜೆ ಜಲಾಶಯಕ್ಕೆ ಭೇಟಿ ನೀಡಿ ಜಲಸಸ್ಯ ರಾಶಿ ತೆರವು ಕಾಮಗಾರಿ ಹಾಗೂ ತಡೆಗೋಡೆ ಬಿರುಕು ಬಿಟ್ಟಿರುವುದನ್ನು ವೀಕ್ಷಿಸಿ, ನೀರಾವರಿ ಇಲಾಖೆಯ ಇಂಜಿನಿಯರ್ ಜೊತೆ ಚರ್ಚಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, 'ಎ' ಬ್ಲಾಕ್, ಬಾಪೂಜಿ ಎಮ್‌ಬಿಎ ಕಾಲೇಜ್ ಅಥಣಿ ಕಾಲೇಜ್, ಕುಂದುವಾಡ ಕೆರೆ ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ಬೇಕಾಗಿದ್ದಾರೆ**

Diploma in Hardware Networking / Software
2 ವರ್ಷ ಅನುಭವ ಇರುವವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.
**ಸಂಪರ್ಕಿಸಿ : ಎ.ಕೆ. ಫಾರ್ಮ**
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.



**ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
# 683/2, 8ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.ದೂರವಾಣಿ : 08192-259693

**ಮಾನ್ಯ ಸದಸ್ಯರ ಗಮನಕ್ಕೆ**


ನಮ್ಮ ಸೊಸೈಟಿಯ 2020-2021ನೇ ಸಾಲಿನ 25ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 28.11.2021ನೇ ಭಾನುವಾರ ಬೆಳಿಗ್ಗೆ 11 ಕ್ಕೆ ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್ ಮೂಲಕ ಸೊಸೈಟಿ ಅಧ್ಯಕ್ಷರಾದ ಶ್ರೀ ಎಸ್.ಎಂ. ವೀರಭದ್ರಸ್ವಾಮಿ ತ್ಯಾವಣಗಿ ಇವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಈ ವರ್ಚುವಲ್ ಮಹಾಸಭೆಯಲ್ಲಿ ಸರ್ವ ಸದಸ್ಯರು ಭಾಗವಹಿಸಿ, ಈ ಮಹಾಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.

ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಸರ್ವ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ಕೆಲವು ಆಹ್ವಾನ ಪತ್ರಿಕೆಗಳು ವಾಪಸ್ ಬಂದಿರುತ್ತವೆ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಸೊಸೈಟಿ ಕಛೇರಿ ವೇಳೆಯಲ್ಲಿ ಆಗಮಿಸಿ, ವಿಳಾಸವನ್ನು ಸರಿಪಡಿಸಿಕೊಳ್ಳಬೇಕು. ಜೊತೆಗೆ, **ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್ ಮೂಲಕ** ನಡೆಯುತ್ತಿರುವ ಈ ಸಭೆಗೆ ಸಂಬಂಧಿಸಿದಂತೆ ವೆಬ್ ಲಿಂಕನ್ನು ಮಾನ್ಯ ಸದಸ್ಯರ ವ್ಯಾಟ್ಸಾಪ್‌ಗಳಿಗೆ ಕಳುಹಿಸಬೇಕಾಗಿರುವುದರಿಂದ ಮಾನ್ಯ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಗಳನ್ನು ಈಗಾಗಲೇ ಕೊಡದೇ ಇದ್ದಲ್ಲಿ ಸಂಘದ ಕಛೇರಿ ವೇಳೆಯಲ್ಲಿ ಆಗಮಿಸಿ, ಮೊಬೈಲ್ ಸಂಖ್ಯೆಯನ್ನು ನೋಂದಾಯಿಸುವಂತೆ ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 08192-259693 ಅಥವಾ ಮೊಬೈಲ್ : 87922 89139 ಕ್ಕೆ ಸಂಪರ್ಕಿಸಬಹುದು.

https://ihost.iroot.in/m/svm Login with your mobile no. password is : 123456

| ಸಹಿ/- | ಸಹಿ/- | ಸಹಿ/- |
|---|---|---|
| ತ್ಯಾವಣಗಿ ವೀರಭದ್ರಸ್ವಾಮಿ | ಪಂಚಾಕ್ಷರಯ್ಯ (ಬಸಾಪುರ) | ಶ್ರೀಮತಿ ತನುಜಾ |
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಭಾರಿ ಕಾರ್ಯದರ್ಶಿ |





# ನಾಳೆ ಶಾಸಕ ಎಸ್.ಎ. ರವೀಂದ್ರನಾಥ್ ಅಮೃತ ಮಹೋತ್ಸವ



**ಕೃಷಿ ಕಣ್ಮಣಿ ಪುಸ್ತಕ ಬಿಡುಗಡೆ**

ದಾವಣಗೆರೆ, ನ.24- ಮಾಜಿ ಸಚಿವರೂ, ಶಾಸಕರೂ ಆದ ಎಸ್.ಎ. ರವೀಂದ್ರನಾಥ್ ಅವರ '75ನೇ ಜನ್ಮದಿನ ಅಮೃತ ಮಹೋತ್ಸವ'ದ ಅಭಿನಂದನಾ ಸಮಾರಂಭ ಮತ್ತು ಎಸ್.ಎ.ಆರ್. ಅವರ ಕುರಿತ 'ಕೃಷಿ ಕಣ್ಮಣಿ' ಪುಸ್ತಕ ಬಿಡುಗಡೆ ಸಮಾರಂಭವು ನಾಡಿದ್ದು ದಿನಾಂಕ 26ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಎಸ್.ಎಸ್. ಕಲ್ಯಾಣ ಮಂಪಟದಲ್ಲಿ ನಡೆಯಲಿದೆ ಎಂದು ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಜಿ. ಸಂಗಪ್ಪಗೌಡ್ರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿನಂದನಾ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಗೌರವ ಸಮರ್ಪಣೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಸದ ಜಿ.ಎ. ಸಿದ್ದೇಶ್ವರ ಅವರು ಅಭಿನಂದನಾ ನುಡಿಗಳನ್ನಾಡಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಮಾಡಾಳ್ ವಿರೂಪಾಕ್ಷಪ್ಪ, ಪ್ರೊ.ಲಿಂಗಣ್ಣ, ಕರುಣಾಕರ ರೆಡ್ಡಿ ಆಗಮಿಸಲಿದ್ದಾರೆ.

> ಮಹಾನಗರ ಪಾಲಿಕೆ ಸದಸ್ಯರು ಸೇರಿ ವಂತಿಗೆ ನೀಡಿ ರವೀಂದ್ರನಾಥ್ ಅವರ ಹೆಸರಿನಲ್ಲಿ ಸರ್ಕಾರಿ ಶಾಲೆಯೊಂದರಲ್ಲಿ ಕೊಠಡಿ ನಿರ್ಮಾಣ ಮಾಡಿ, ಹಿರಿಯ ಮುತ್ಸದ್ಧಿಗೆ ಗೌರವ ನೀಡಲು ತೀರ್ಮಾನಿಸಲಾಗಿದೆ.
>
> - ಎಸ್. ಟಿ. ವೀರೇಶ್, ಮೇಯರ್

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಎಸ್.ಎ. ರವೀಂದ್ರನಾಥ್ ಅವರು ಕಳೆದ ಐದು ದಶಕಳಿಂದ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಯಶಸ್ಸು ಕಂಡು ಇದೀಗ ಅಮೃತ ಮಹೋತ್ಸವ ಆಚರಿಸುಕೊಳ್ಳುತ್ತಿರುವುದು ವಿಶೇಷ ದಿನವಾಗಿದೆ.

ಶಿವರಾಜ್ ಪಾಟೀಲ್ ಮಾತನಾಡಿ, ಬಡ ಮಹಿಳೆಗೆ ನ್ಯಾಯ ಬೆಲೆ ಅಂಗಡಿಯಲ್ಲಿ ಸಕ್ಕರೆ ಕೊಡಿಸುವ ಮೂಲಕ ಆರಂಭವಾದ ರವೀಂದ್ರನಾಥ್ ಅವರ ಹೋರಾಟದ ಬದುಕು, ನಂತರ ರಾಜಕೀಯ ಕ್ಷೇತ್ರದಲ್ಲಿ ಶಾಸಕರು, ಸಚಿವರಾಗಿ ಜನ ಮನ್ನಣೆಗೆ ಪಾತ್ರರಾಗಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎನ್. ಹನುಮಂತಪ್ಪ, ಬಸವರಾಜಯ್ಯ, ಕೆ. ಪ್ರಸನ್ನಕುಮಾರ್, ರಾಜು ಶಾಮನೂರು ಉಪಸ್ಥಿತರಿದ್ದರು.

# ಎ.ಸಿ.ಬಿ. ದಾಳಿ : ಅಧಿಕಾರಿ ಮನೆಯ ಪೈಪ್‌ನಲ್ಲಿ ನೋಟಿನ ಕಂತೆಗಳು



ಕಲಬುರಗಿ, ನ. 24 - ಬುಧವಾರ ಭ್ರಷ್ಟಾಚಾರ ನಿಗ್ರಹ ದಳ (ಎ.ಸಿ.ಬಿ.)ದ ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯ ಅಧಿಕಾರಿ ಶಾಂತಗೌಡ ಬಿರಾದಾರ್ ಅವರ ಕಲಬುರ್ಗಿಯ ಗುಬ್ಬಿ ಕಾಲೋನಿಯಲ್ಲಿರುವ ಮನೆ, ಕಚೇರಿ ಮತ್ತು ಯಡ್ರಾಮಿಯಲ್ಲಿರುವ ತೋಟದ ಮನೆ ಮೇಲೆ ದಾಳಿ ನಡೆಸಿದಾಗ, ಪೈಪ್‌ನೊಳಗೆ ಐನೂರರ ಕಂತೆಯ ನೋಟುಗಳು ಕಂಡು ಬಂದಿವೆ.

ಮನೆಯ ಡ್ರೈನೇಜ್ ಪೈಪಿನಲ್ಲಿ ಬಚ್ಚಿಟ್ಟ 13.5 ಲಕ್ಷ, ವಾಲ್ ಸೀಲಿಂಗ್‌ನಲ್ಲಿ ಬಚ್ಚಿಟ್ಟ 6 ಲಕ್ಷ ರೂ. ನಗದು ಸೇರಿ 54 ಲಕ್ಷ ರೂ. ನಗದು ಹಾಗೂ ಚಿನ್ನಾಭರಣ ಪತ್ತೆಯಾಗಿದೆ. ಇನ್ನು, ಎರಡು ಲಾಕರ್‌ಗಳು ತೆರೆಯುವುದು ಬಾಕಿ ಇದ್ದು, ಶಾಂತಗೌಡ ಅವರ ಕುಟುಂಬ ಬೆಂಗಳೂರಿನಲ್ಲಿ ಇರುವುದರಿಂದ ಲಾಕರ್ ಕೀ ಅವರ ಬಳಿ ಇದೆ. ಹೀಗಾಗಿ ಲಾಕರ್ ತೆರೆಯುವುದು ತಡವಾಗುತ್ತಿದೆ ಎನ್ನಲಾಗಿದೆ.

ಎ.ಸಿ.ಬಿ. ಅಧಿಕಾರಿಗಳು ಮನೆಯ ಮೇಲೆ ದಾಳಿ ನಡೆಸಿದಾಗ ಇದರ ಸುಳಿವು ಅರಿತ ಶಾಂತನಗೌಡ, 10 ನಿಮಿಷ ಬಾಗಿಲು ತೆರೆದಿರಲಿಲ್ಲ. ಈ ವೇಳೆ ಪೈಪ್‌ನಲ್ಲಿ ಹಣ, ಚಿನ್ನಾಭರಣವನ್ನು ಬಿಸಾಕಿದ್ದಾರೆ ಎಂದು ಹೇಳಲಾಗುತ್ತಿದೆ.

ಮನೆಯನ್ನು ತಪಾಸಣೆ ನಡೆಸಿದ ಅಧಿಕಾರಿಗಳಿಗೆ ಪೈಪ್‌ನಲ್ಲಿ ಹಣ ಇರುವುದು ಗೊತ್ತಾಗಿ, ಪ್ಲಂಬರ್ ಒಬ್ಬನನ್ನು ಕರೆಯಿಸಿ ಪೈಪ್ ಕಟ್ ಮಾಡಿಸಿದಾಗ ಹಣ ಪತ್ತೆಯಾಗಿದೆ. ಲಾಕರ್‌ನ ಒಂದು ಬಾಕ್ಸ್ ನಲ್ಲಿ 100 ಗ್ರಾಂ. ಚಿನ್ನಾಭರಣ ಪತ್ತೆಯಾಗಿದೆ.

ತೋಟದ ಮನೆಯಲ್ಲೂ ವಾಹನಗಳು, ಐಷಾರಾಮಿ ರೂಂಗಳಿವೆ. ಜೊತೆಗೆ ಐಷಾರಾಮಿ ಕಾರುಗಳಿವೆ. ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು ಕೂಡಾ ಪತ್ತೆಯಾಗಿವೆ. ಮನೆಗಳು, ನಿವೇಶನಗಳು ಸೇರಿ ಅನೇಕ ದಾಖಲಾತಿಗಳು ಕೂಡ ಪತ್ತೆಯಾಗಿವೆ.

# ನಗರದಲ್ಲಿಂದು ಕಸಾಪ ನೂತನ ಜಿಲ್ಲಾಧ್ಯಕ್ಷರ ಕಾರ್ಯಭಾರ ಸ್ವೀಕಾರ ಸಮಾರಂಭ



ಕನ್ನಡ ಸಾಹಿತ್ಯ ಪರಿಷತ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ಬಿ.ವಾಮದೇವಪ್ಪ ಅವರು ಕುವೆಂಪು ಕನ್ನಡ ಭವನದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಕಸಾಪ ಆಡಳಿತಾಧಿಕಾರಿಯಾಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರವಿಚಂದ್ರ ಅವರಿಂದ ಕಾರ್ಯಾಭಾರ ಸ್ವೀಕರಿಸಲಿದ್ದಾರೆ.

ಆಯ್ಕೆಗೆ ಸಹಕರಿಸಿದ ಪರಿಷತ್ತಿನ ಸದಸ್ಯರುಗಳಿಗೆ ಕೃತಜ್ಞತೆ ಸಲ್ಲಿಸಿರುವ ಬಿ.ವಾಮದೇವಪ್ಪ, ಸದಸ್ಯರು, ಸ್ನೇಹಿತರು, ಹಿತೈಷಿಗಳು ಯಾವುದೇ ಹಾರ, ತುರಾಯಿ, ಶಾಲು, ಪೇಟ ಇತ್ಯಾದಿಗಳನ್ನು ತರದೇ, ಪುಸ್ತಕಗಳ ರೂಪದಲ್ಲಿ ತಮ್ಮ ನೆನಪುಗಳನ್ನು ಹಂಚಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

# ಐ.ಐ.ಟಿ.ಗಳಲ್ಲಿ ಮೀಸಲಾತಿ : ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ, ನ. 24 – ಐ.ಐ.ಟಿ.ಗಳ ಬೋಧಕ ಸಿಬ್ಬಂದಿ ನೇಮಕಾತಿ ಹಾಗೂ ಸಂಶೋಧನಾ ಪದವಿ ಕಾರ್ಯಕ್ರಮಗಳ ಪ್ರವೇಶದಲ್ಲಿ ಮೀಸಲಾತಿ ಕಲ್ಪಿಸುವ ಬಗ್ಗೆ ಸುಪ್ರಿಂ ಕೋರ್ಟ್ ಕೇಂದ್ರ ಸರ್ಕಾರ ಐ.ಐ.ಟಿ.ಗಳಿಗೆ ನೋಟಿಸ್ ಕಳಿಸಿದೆ.


ಮೀಸಲಾತಿ ಕಲ್ಪಿಸುವಂತೆ ಕೋರಿ ದಾಖಲಿಸಲಾಗಿರುವ ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿಗಳಾದ ಎಲ್.ಎನ್.ರಾವ್, ಬಿ.ಆರ್. ಗವಾಯಿ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಅಂಗೀಕರಿಸಿದ ನಂತರ ನೋಟಿಸ್‌ಗಳನ್ನು ಕಳಿಸಲಾಗಿದೆ. ಸಚ್ಚಿದಾನಂದ ಪಾಂಡೆ ಎಂಬುವವರು ಅರ್ಜಿ ದಾಖಲಿಸಿದ್ದು, ಹಾಲಿ ಇರುವ ಬೋಧಕರ ಕಾರ್ಯ ನಿರ್ವಹಣೆ ಪರಿಶೀಲನೆಗೆ ಸಮಿತಿ ರಚಿಸಬೇಕು ಎಂದೂ ಕೇಳಿದ್ದಾರೆ.

# ಗದಗ ಕೃಷಿ ಇಲಾಖೆ ಜಂಟಿ ನಿರ್ದೇಶಕನ ಸ್ವಗ್ರಾಮ ಚನ್ನಗಿರಿ ಮನೆ ಮೇಲೆ ಎಸಿಬಿ ದಾಳಿ

ದಾವಣಗೆರೆ, ನ.24- ಗದಗ ಜಿಲ್ಲೆಯ ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಅವರ ಶಿವಮೊಗ್ಗದ ಚಾಣಕ್ಯ ನಗರದ ಮನೆ ಅಷ್ಟೇ ಅಲ್ಲದೇ, ಸ್ವಗ್ರಾಮ ಚನ್ನಗಿರಿ ತಾಲ್ಲೂಕಿನ ತಣಿಗೆರೆ ಗ್ರಾಮದ ಮನೆ ಮೇಲೂ ಎಸಿಬಿ ಅಧಿಕಾರಿಗಳ ನೇತೃತ್ವದ ತಂಡ ಇಂದು ಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಿವೆ.

ಎಸಿಬಿ ಎಸ್ಪಿ ಜಯಪ್ರಕಾಶ್ ನೇತೃತ್ವದಲ್ಲಿ ಅಧಿಕಾರಿ, ಸಿಬ್ಬಂದಿಗಳ ತಂಡವು ದಾಳಿ ನಡೆಸಿ, ಆಸ್ತಿ ಪತ್ರಗಳು, ದಾಖಲೆಗಳು ಸೇರಿದಂತೆ ಮಹತ್ವದ ದಾಖಲೆಗಳನ್ನು ಸಂಜೆವರೆಗೂ ಪರಿಶೀಲಿಸುವ ಕಾರ್ಯದಲ್ಲಿ ತೊಡಗಿತು. ಚನ್ನಗಿರಿಯಲ್ಲಿ ಭೂಮಿ ಹೊಂದಿರುವ ಬಗ್ಗೆಯೂ ಪರಿಶೀಲನೆ ನಡೆಸಲಾಗಿದೆ.

# ರಾಜ್ಯ ಬಾಲಕಿಯರ ಖೋ-ಖೋ ತಂಡಕ್ಕೆ ತರಬೇತುದಾರರಾಗಿ ನಂದಿನಿ



ಹರಪನಹಳ್ಳಿ, ನ. 24- ಇದೇ ದಿನಾಂಕ 27 ರಿಂದ ಡಿಸೆಂಬರ್ 1ರವರೆಗೆ ಹಿಮಾಚಲ ಪ್ರದೇಶದ ಹುನಾ ದಲ್ಲಿ ನಡೆಯಲಿರುವ 31ನೇ ಸಬ್ ಜ್ಯೂನಿಯರ್ ನ್ಯಾಷನಲ್ ಖೋ-ಖೋ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲಿರುವ ರಾಜ್ಯ ಬಾಲಕಿಯರ ತಂಡಕ್ಕೆ ತರಬೇತುದಾರ ರಾಗಿ ಪಟ್ಟಣದ ನವೋದಯ ಕ್ರೀಡಾ ಸಂಸ್ಥೆಯ ಹಿರಿಯ ಕ್ರೀಡಾಪಟು ಹಾಗೂ ಕೆ.ಸಿ.ಎ. ವಿದ್ಯಾಸಂಸ್ಥೆಯ ದೈಹಿಕ ಶಿಕ್ಷಕರಾದ ನಂದಿನಿ ಒಡೆಯರ್ ಆಯ್ಕೆಯಾಗಿದ್ದಾರೆ.

# ಸಿಆರ್‌ಪಿಎಫ್ ಯೋಧರ ಪರಿಹಾರ ಹೆಚ್ಚಳ

ನವದೆಹಲಿ, ನ. 24 – ಕಾರ್ಯಾಚರಣೆ ಸಂದರ್ಭದಲ್ಲಿ ಹಾಗೂ ಇತರೆ ಹೊಣೆಗಾರಿಕೆಗಳ ಮೇಲೆ ಕರ್ತವ್ಯದಲ್ಲಿರುವಾಗ ಸಾವನ್ನಪ್ಪುವ ಸಿ.ಆರ್.ಪಿ.ಎಫ್. ಯೋಧರ ಕುಟುಂಬಗಳಿಗೆ ನೀಡುವ ಪರಿಹಾರವನ್ನು ಹೆಚ್ಚಿಸಲಾಗಿದೆ. ನೂತನ ನಿಯಮಗಳ ಅನ್ವಯ ಹೋರಾಟದ ಸಂದರ್ಭದಲ್ಲಿ ಹತರಾಗುವ ಯೋಧರ ಕುಟುಂಬಗಳಿಗೆ 35 ಲಕ್ಷ ರೂ. ಪರಿಹಾರ ನೀಡಲಾಗುವುದು. ಪ್ರಸಕ್ತ 21.5 ಲಕ್ಷ ರೂ. ಪರಿಹಾರ ಕೊಡಲಾಗುತ್ತಿದೆ.

ಸೇವೆಯಲ್ಲಿರುವಾಗ ಅಪಘಾತ, ಆತ್ಮಹತ್ಯೆ ಇಲ್ಲವೇ ರೋಗಗಳಿಂದ ಸಾವನ್ನಪ್ಪುವವರ ಕುಟುಂಬಗಳಿಗೆ 25 ಲಕ್ಷ ರೂ.ಪರಿಹಾರ ನೀಡಲಾಗುವುದು. ಪ್ರಸಕ್ತ ಅವರಿಗೆ 16.5 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ.

# ಕೃಷಿ ಪತ್ತಿನ ಅಧ್ಯಕ್ಷರಾಗಿ ನಾಗರಾಜಪ್ಪ




ದಾವಣಗೆರೆ, ನ.24- ತಾಲ್ಲೂಕಿನ ಲೋಕಿಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಟಿ. ನಾಗರಾಜಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.






# ವಿಪ ಅಭ್ಯರ್ಥಿ ಆಸ್ತಿ 1,743 ಕೋಟಿ ರೂ.

ಬೆಂಗಳೂರು, ನ. 24 – ಮಂಬರುವ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯುಸುಫ್ ಷರೀಫ್ ಅವರು ತಮ್ಮ ಆಸ್ತಿ 1,743 ಕೋಟಿ ರೂ. ಎಂದು ಚುನಾವಣಾ ಆಯೋಗದ ಎದುರು ಘೋಷಿಸಿಕೊಡಿದ್ದಾರೆ.

ಉಮ್ರಾ ಡೆವಲಪರ್ಸ್ ಮಾಲೀ ಕರಾಗಿರುವ 54 ವರ್ಷದ ಶರೀಫ್ ಮೊದಲು ಗುಜರಿ ವರ್ತಕರಾಗಿದ್ದರು. ನಂತರದಲ್ಲಿ ಅವರು ಶ್ರೀಮಂತರಾಗಿ ದ್ದಾರೆ. ಶರೀಫ್ ಎರಡು ರೋಲ್ಸ್ ರಾಯ್ಸ್ ಕಾರುಗಳನ್ನು ಹೊದಿದ್ದಾರೆ. ತೆರಿಗೆ ವಂಚನೆ ಶಂಕೆಯ ಮೇಲೆ ಇತ್ತೀಚೆಗೆ ಅವರ ರೋಲ್ಸ್ ರಾಯ್ಸ್ ಕಾರುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ಗುಜರಿ ಬಾಬು ಎಂದೇ ಹೆಸರಾದ ಅವರಿಂದ ಅಮಿತಾಬ್ ಬಚ್ಚನ್ ಒಂದು ರೋಲ್ಸ್ ರಾಯ್ಸ್ ಕಾರು ಖರೀದಿಸಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte